ನವಸಾಕ್ಷರ ಪುಸ್ತಕ ಮಾಲೆ ೬೦

ಬೀರ್‌ಬಲ್

ಎನ್. ಪ್ರಭಾ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ-೬೦

ಬೀರ್‌ಬಲ್

ಎಸ್. ಪ್ರಭಾ

ಮಾತೆಂಬುದು ಜ್ಯೋತಿರ್ಲಿಂಗ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

BIRBAL : By N. Prabha. Published by The Director of Prasaranga,
Kannada University, Hampi - 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಡಾ|| ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು

ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ ೮.೦೦

ಮುದ್ರಕರು
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
೩/೩, ೧ನೇ ಮುಖ್ಯ ರಸ್ತೆ,
ಹೊಸ ತರಗುಪೇಟೆ,
ಬೆಂಗಳೂರು ೫೬೦ ೦೦೨

ಬೀರ್‌ಬಲ್

ಹಿಂದೆ ದೆಹಲಿಯಲ್ಲಿ ಅಕಬರನೆಂಬ ರಾಜನಿದ್ದ. ಅವನು ಬಹಳ ಬುದ್ಧಿಶಾಲಿ ಹಾಗೂ ಕರುಣಾಳು ಎಂದು ಹೆಸರಾಗಿದ್ದ. ಆದರೆ ಅವನಿಗೆ ಬಹುಬೇಗ ಕೋಪ ಬರುತ್ತಿತ್ತು. ಒಂದು ಸಾರಿ ಕೆಲಸದವನಿಗೆ ಎಲೆ ಅಡಿಕೆ ಮಡಿಸಿಕೊಡು ಎಂದು ರಾಜ ತಿಳಿಸಿದ. ಕೆಲಸದವನು ಅವಸರದಲ್ಲಿ ಎಲೆಗೆ ಸ್ವಲ್ಪ ಹೆಚ್ಚು ಸುಣ್ಣವನ್ನು ಹಾಕಿದ. ಅದನ್ನು ತಿಂದ ಅಕಬರನ ನಾಲಿಗೆ ಸುಟ್ಟುಹೋಯಿತು. ಇದರಿಂದ ಕೋಪಗೊಂಡ ಅಕಬರನು -

"ಇನ್ನೊಂದು ಸಾರಿ ಇಂತಹ ತಪ್ಪು ಮಾಡಿದರೆ ನಿನ್ನನ್ನು ಕೆಲಸದಿಂದ ತೆಗೆದು ಹಾಕುತ್ತೇನೆ" ಎಂದು ಹೆದರಿಸಿದ.

ಸ್ವಲ್ಪ ದಿನಗಳ ಬಳಿಕ ಅಕಬರ ಮತ್ತೆ ಎಲೆ ಅಡಿಕೆ ಮಡಿಸಿ ತರುವಂತೆ ಕೆಲಸದವನಿಗೆ ಹೇಳಿದ. ಈ ಬಾರಿಯೂ ಅಜಾಗರೂಕತೆಯಿಂದ ಅವನು ಹೆಚ್ಚು ಸುಣ್ಣವನ್ನೇ ಹಾಕಿದ. ಅಕಬರನ ನಾಲಿಗೆ ಮತ್ತೆ ಸುಟ್ಟಿತು. ಇದರಿಂದ ಅಕಬರ ಕೋಪಗೊಂಡು "ಅಂಗಡಿಗೆ ಹೋಗಿ ಒಂದು ಸೇರು ಸುಣ್ಣ ತೆಗೆದುಕೊಂಡು ಬಾ" ಎಂದು ಕೆಲಸದವನಿಗೆ ಅಪ್ಪಣೆ ಮಾಡಿದ.

ಕೆಲಸದವನು ಅಂಗಡಿಗೆ ಹೋಗಿ "ಒಂದು ಸೇರು ಸುಣ್ಣ ಕೊಡಿ" ಎಂದ. ಅಂಗಡಿಯವನೊಂದಿಗೆ ಕುಳಿತಿದ್ದ ಬೀರಬಲ್ಲನೆಂಬ ಯುವಕ "ಅಷ್ಟೊಂದು ಸುಣ್ಣ ಯಾಕೆ? ನೀನು ರಾಜನಿಗೆ ಕೋಪಬರುವಂತಹಾ ಕೆಲಸವೇನಾದರೂ ಮಾಡಿದಿಯಾ?" ಎಂದು ಕೆಲಸದವನನ್ನು



ಅಕಬರ ಕೆಲಸದವನಿಗೆ ವಿಧಿಸಿದ "ಸುಣ್ಣ ತಿನ್ನುವ ಶಿಕ್ಷೆ"

ಕೇಳಿದ. ಕೆಲಸದವನು ಹೆಚ್ಚು ಸುಣ್ಣ ಹಚ್ಚಿದ ವಿಷಯವನ್ನು ಹೇಳಿದ. ಆಗ ಬೀರ್‌ಬಲ್ "ಹಾಗಾದರೆ ರಾಜರ ಮುಂದೆ ಹೋಗೋ ಮುಂಚೆ ಒಂದು ಸೇರು ತುಪ್ಪ ಕುಡಿದು ಹೋಗು" ಎಂದ. ಕೆಲಸದವನು "ಯಾಕೆ?" ಎಂದು ಪ್ರಶ್ನಿಸಿದ.

"ಈಗ ನಾನು ಹೇಳಿದ ಹಾಗೆ ಮಾಡು. ಉಳಿದದ್ದನ್ನು ಆಮೇಲೆ ಹೇಳುತ್ತೇನೆ" ಎಂದ ಬೀರ್‌ಬಲ್.

ಅವನ ಮಾತಿನಂತೆ ಕೆಲಸದವ ಮನೆಗೆ ಹೋಗಿ ಒಂದು ಸೇರು ತುಪ್ಪ ಕುಡಿದ. ರಾಜನ ಬಳಿಗೆ ಹೋದ. ರಾಜ ತನ್ನ ಮುಖ್ಯಮಂತ್ರಿಯನ್ನು ಕರೆದು, "ಇವನಿಗೆ ಒಂದು ಸೇರು ಸುಣ್ಣ ತಿನ್ನಿಸಿ" ಎಂದು ಅಪ್ಪಣೆ ಮಾಡಿದ.

ಕೆಲಸದವನು ಸುಣ್ಣ ತಿಂದು ಮನೆಗೆ ಹೋದ. ತುಪ್ಪವನ್ನು ಕುಡಿದಿದ್ದುದರಿಂದ ಸ್ವಲ್ಪ ಹೊತ್ತಿನಲ್ಲಿಯೇ ಅವನಿಗೆ ವಾಂತಿಯಾಯಿತು. ತನ್ನ ಪ್ರಾಣ ಉಳಿದುದಕ್ಕೆ ಅವನು ಸಂತೋಷಪಟ್ಟ. ಅವನು ಬೀರ್‌ಬಲ್‌ನ ಬಳಿಗೆ ಹೋಗಿ "ನಿಮಗೆ ತುಂಬಾ ಧನ್ಯವಾದ, ನಿಮ್ಮ ಉಪಾಯದಿಂದ ನನ್ನ ಜೀವ ಉಳಿಯಿತು, ಆದರೆ ನನ್ನ ಕೆಲಸ ಹೋಯಿತು" ಎಂದ. "ರಾಜರ ಹತ್ತಿರ ಹೋಗಿ ಕ್ಷಮಾಪಣೆ ಕೇಳಿಕೊ" ಎಂದು ಸಲಹೆ ಮಾಡಿದ ಬೀರ್‌ಬಲ್. ಕೆಲಸದವನು ಅಕಬರನ ಮುಂದೆ ಹೋಗಿ ನಿಂತ. ಅವನನ್ನು ಕಂಡು ಅಕಬರನಿಗೆ ಅಚ್ಚರಿಯಾಯಿತು. "ಒಂದು ಸೇರು ಸುಣ್ಣ ತಿಂದ ಮೇಲೂ ನೀನು ಹೇಗೆ ಬದುಕಿದ್ದೀಯಾ?" ಎಂದು ಅಕಬರ ಕೇಳಿದ. "ನನ್ನ ಗೆಳೆಯರೊಬ್ಬರು ಹೇಳಿದ ಹಾಗೆ ಸುಣ್ಣ ತಿನ್ನುವುದಕ್ಕೆ ಮುಂಚೆ ತುಪ್ಪ ತಿಂದಿದ್ದೆ" ಎಂದು ಉತ್ತರಿಸಿದ ಕೆಲಸದವ.

"ಯಾರು ಆ ಗೆಳೆಯ? ಅವನ ಹೆಸರೇನು?"

"ಅವನ ಹೆಸರು ಬೀರ್‌ಬಲ್"

"ಈ ಬೀರ್‌ಬಲ್ ಬಹಳ ಮೇಧಾವಿಯ ಹಾಗೆ ಕಾಣುತ್ತಾನೆ. ಇವನನ್ನೂ ಒಬ್ಬ ಮಂತ್ರಿಯಾಗಿ ಮಾಡಿಕೊಂಡರೆ ಒಳ್ಳೆಯದು" ಎಂದುಕೊಳ್ಳುತ್ತಾ ಅಕಬರ ಬೀರ್‌ಬಲ್‌ನನ್ನು ಕರೆಸಿ ಪರೀಕ್ಷೆಮಾಡಿದ. ನಂತರ ಅವನನ್ನು ತನ್ನ ಮಂತ್ರಿಯಾಗಿ ನೇಮಿಸಿಕೊಂಡ.

ಹೀಗೆ ಹದಿನಾರನೇ ಶತಮಾನದಲ್ಲಿದ್ದ ಪ್ರಸಿದ್ಧ ಮೊಗಲ್ ದೊರೆ ಅಕಬರನ ಪ್ರೀತಿಯ ಮಂತ್ರಿ, ಆಸ್ಥಾನದ ಹಾಸ್ಯಗಾರ ಎನಿಸಿದವ ಬೀರ್‌ಬಲ್.

ಮೇಲಿನ ಕಥೆ ಎಷ್ಟರಮಟ್ಟಿಗೆ ನಿಜವಾದುದೋ ಗೊತ್ತಿಲ್ಲ. ಒಟ್ಟಾರೆ ಬೀರ್‌ಬಲ್ ತನ್ನ ಬುದ್ಧಿಶಕ್ತಿಯಿಂದಾಗಿ ರಾಜನ ಗಮನ ಸೆಳೆದು ಅವನ ಆಪ್ತನೆನಿಸಿದ ಎಂಬ ವಿವರ ಇಲ್ಲಿ ಕಾಣಬರುತ್ತದೆ. ತನ್ನ ಬುದ್ಧಿವಂತಿಕೆ, ಚತುರತೆ, ಕವಿಪ್ರತಿಭೆಗಳಿಂದ ಅಕಬರನಂತಹ ಪ್ರಸಿದ್ಧ ಸಾಮ್ರಾಟನನ್ನು ಮೆಚ್ಚಿಸಿದವನು ಬೀರ್‌ಬಲ್. ಅಕಬರ್ ಅಂದ ಕೂಡಲೇ ಬೀರ್‌ಬಲ್ ಎಂಬ ಹೆಸರು ಥಟ್ಟನೆ ಬಾಯಿಗೆ ಬರುವಷ್ಟು ಜನಪ್ರಿಯತೆ ಗಳಿಸಿದ ವ್ಯಕ್ತಿಗಳಿವರು. ತಮ್ಮ ಜನಪ್ರಿಯತೆಯಿಂದಾಗಿಯೇ ದಂತಕತೆಗಳಾಗಿ ಬಿಟ್ಟಿರುವುದೂ ನಿಜ.

ಈ ಅಕಬರ್ ಯಾರು?

ಬೀರ್‌ಬಲ್‌ನ ಬಗೆಗೆ ತಿಳಿಯುವುದಕ್ಕೆ ಮುಂಚೆ ಇವನಿಗೆ ಆಶ್ರಯವಿತ್ತ ರಾಜ ಅಕಬರನ ಬಗೆಗೆ ಒಂದೆರಡು ವಿಚಾರಗಳನ್ನು ತಿಳಿಯುವುದು ಸೂಕ್ತ.

"ದೊಡ್ಡ ಸಾಮ್ರಾಜ್ಯದ ಪ್ರಭು ನಾನು. ಸರಕಾರದ ಸಾಧನೆಗಳೆಲ್ಲ ನನ್ನ ಕೈಯಲ್ಲಿ. ಆದರೆ ನಿಜವಾದ ಹಿರಿಮೆ ದೇವರ ಚಿತ್ತದಂತೆ ನಡೆಯುವುದರಲ್ಲಿ. ಆದುದರಿಂದ ಈ ಮತಗಳ ಮತ್ತು ಪಂಥಗಳ ವಿಂಗಡಣೆಯಿಂದ ನನಗೆ ನೆಮ್ಮದಿಯಿಲ್ಲ. ನನ್ನ ಸ್ಥಾನದ ವೈಭವವೆಲ್ಲ ಹಾಗಿರಲಿ. ಈ ಬೇಸರದಲ್ಲಿ ನಾನು ಆಡಳಿತಕ್ಕೆ ಹೇಗೆ ತಾನೇ ಮನಸ್ಸು ಕೊಡಲಿ? ನನ್ನ ಅಂತರಾತ್ಮದ ಸಂಶಯಗಳನ್ನು ಪರಿಹರಿಸುವ ಮಹಾನುಭಾವನನ್ನು ಇದಿರು ನೋಡುತ್ತಿದ್ದೇನೆ"

ಈ ಮಾತುಗಳನ್ನಾಡಿದವನು ನಾಲ್ಕುನೂರು ವರ್ಷಗಳ ಹಿಂದೆ ಭಾರತವನ್ನು ಆಳುತ್ತಿದ್ದ ಮೊಗಲ್ ಸಾಮ್ರಾಟ ಅಕಬರ್. ದೆಹಲಿಯಲ್ಲಿ ಆಳುತ್ತಿದ್ದ, ಮೊಗಲ್ ರಾಜವಂಶಕ್ಕೆ ಸೇರಿದ ರಾಜನಿವನು. ಇವನ ಆಳ್ವಿಕೆಯ ಕಾಲ ಇತಿಹಾಸ ಪ್ರಸಿದ್ಧವಾದುದು. ಅಕಬರ್ ಅತ್ಯಂತ ಪರಿಣತ ಆಡಳಿತಗಾರ ಹಾಗೂ ಚಿಂತಕ. ಭಾರತವನ್ನು ಒಂದು ಆಡಳಿತದ ಅಡಿಯಲ್ಲಿ ತರಲು ಪ್ರಯತ್ನಿಸಿದವನು. ಇವನ ಆಡಳಿತದಲ್ಲಿ ರಾಜಕೀಯ ಆದರ್ಶ ಪ್ರಮುಖವಾಗಿತ್ತು. ಮತಗಳ ನಡುವೆ ಭೇದವೆಣಿಸದ ಪ್ರಸಿದ್ಧ ರಾಜನೆನಿಸಿದವ ಅಕಬರ. ಹೀಗಾಗಿ ಬೀರ್‌ಬಲ್‌ನಂತಹಾ ಹಿಂದೂ ಪಂಡಿತ, ಅಕಬರನ ಪ್ರಿಯಮಂತ್ರಿ ಎನಿಸಿದ್ದರಲ್ಲಿ ಅಚ್ಚರಿಯೇನಿಲ್ಲ.

ಅಕಬರನ ಕಾಲದಲ್ಲಿ ಕೇವಲ ಆಡಳಿತ ಮಾತ್ರವಲ್ಲ, ಕಲೆ, ಸಾಹಿತ್ಯ, ಸಂಗೀತ, ಧರ್ಮ ಹೀಗೆ ಎಲ್ಲವೂ ಹೆಸರು ಪಡೆದವು. ಇವನ ಆಸ್ಥಾನದಲ್ಲಿ ಒಳ್ಳೆಯ ಸಂಗೀತಗಾರರೂ,

ಆಡಳಿತಗಾರರೂ, ವಿದ್ವಾಂಸರೂ, ಕಲಾವಿದರೂ ಇದ್ದರು. ವಿಚಾರಶೀಲ ರಾಜನಾಗಿದ್ದ ಅಕಬರ, ಫತೇಪುರ್ ಸಿಕ್ರಿ ಎಂಬ ಸ್ಥಳದಲ್ಲಿ ಒಂದು ಪ್ರಾರ್ಥನಾಗೃಹ ಕಟ್ಟಿಸಿದ. ತಮ್ಮ ತಮ್ಮ ಮತದ ಬಗೆಗೆ ವಾದಿಸಲು ಎಲ್ಲ ಮತದ ಅನುಯಾಯಿಗಳನ್ನು ಆಹ್ವಾನಿಸಿದ. ಎಲ್ಲ ಧರ್ಮಗಳಲ್ಲಿರುವ ಒಳ್ಳೆಯ ಅಂಶವನ್ನು ಗೌರವಿಸಿ ಅಳವಡಿಸಿಕೊಂಡ. ಎಲ್ಲ ಧರ್ಮಗಳ ಒಳ್ಳೆಯ ಗುಣವನ್ನು ಒಳಗೊಂಡ ಒಂದು ಹೊಸ ಮತವನ್ನು 'ದೀನ್ ಇಲಾಹಿ' ಯನ್ನು ಸ್ಥಾಪಿಸಲು ಪ್ರಯತ್ನಿಸಿದ. 'ದೀನ್‌ಇಲಾಹಿ' ಎಂದರೆ ವಿಶ್ವಶಾಂತಿ. ಇದಕ್ಕೆ ಸೇರಿದ ಒಬ್ಬನೇ ಒಬ್ಬ ಹಿಂದುವೆಂದರೆ ಬೀರ್‌ಬಲ್.

ಹೀಗೆ ಬೀರ್‌ಬಲ್ ಅಕಬರರ ಸ್ನೇಹದಲ್ಲಿ ಅಂದಿನ ಭಾರತದ ಎರಡು ಧರ್ಮಗಳ ಮಧುರ ಬಾಂಧವ್ಯ ಜೊತೆಗೆ ವಿಚಾರವಂತಿಕೆಗೆ ಸಿಕ್ಕ ಬೆಲೆ ಗುರುತಿಸಬಹುದು. ಅಕಬರನ ಆಸ್ಥಾನದಲ್ಲಿದ್ದ ನವರತ್ನಗಳೆನಿಸಿದ್ದ ಒಂಬತ್ತು ಜನ ಮಂತ್ರಿಗಳಲ್ಲಿ ಬೀರ್‌ಬಲ್ ಪ್ರಸಿದ್ಧನಾಗಿದ್ದ. ರಾಜನ ನಂಬಿಕೆಗೆ ಅರ್ಹರಾದ ಮುಖ್ಯರಲ್ಲಿ ಬೀರ್‌ಬಲ್ ಪ್ರಮುಖನೆನಿಸಿದ್ದ. ಬೀರ್‌ಬಲ್ ಹಾಗೂ ಅಕಬರರ ಸಂಬಂಧ ರಾಜ ಮಂತ್ರಿಯದಾದರೂ ಇಬ್ಬರ ನಡುವೆ ಗಾಢ ಸ್ನೇಹ, ವಿಶ್ವಾಸವಿತ್ತು. ರಾಜನಾಗಿದ್ದರೂ ಅವನಲ್ಲಿದ್ದ ತಪ್ಪುಗಳನ್ನು ತೋರಿಸಿಕೊಡಲು ಬೀರ್‌ಬಲ್ ಹಿಂಜರಿದವನಲ್ಲ. ಹಾಗೆಯೇ ರಾಜನೆನಿಸಿದ್ದರೂ ಬೀರ್‌ಬಲ್‌ನ ಬುದ್ಧಿಶಕ್ತಿ ಚತುರತೆಗೆ ಬೆರಗಾಗಿ ಗೌರವಿಸಿದವನು ಅಕಬರ್.

ಬೀರ್‌ಬಲ್ ಎಂಬ ಹೆಸರು ಹೇಗೆ ಬಂತು?

ಬೀರ್‌ಬಲ್‌ನ ಹುಟ್ಟು-ಬೆಳವಣಿಗೆಯ ಬಗೆಗೆ ಖಚಿತವಾದ ಐತಿಹಾಸಿಕ ವಿವರಗಳು ದೊರಕಿಲ್ಲ. ಆದರೆ ಇವನನ್ನು ಕುರಿತು ಅನೇಕ ಕಥೆಗಳಿವೆ. ಇದರಿಂದ ಇವನ ಗುಣದ ವಿವರ ನಮಗೆ ಸಿಗುತ್ತದೆ. ಇವುಗಳಲ್ಲಿ ಸತ್ಯವೆಷ್ಟೋ ತಿಳಿದಿಲ್ಲ. ಇವನ ಜೀವನದ ಬಗೆಗೆ ಬೆಳಕು ಚೆಲ್ಲುವಂತಹಾ ಕಥೆಯೊಂದಿದೆ.

ಬೀರ್‌ಬಲ್ಲನು ಕನೋಜ ಬ್ರಾಹ್ಮಣ ಕುಲದ ಬಡ ಮನೆತನದಲ್ಲಿ ಕ್ರಿಸ್ತಶಕ ಸಾವಿರದ ಐನೂರ ಇಪ್ಪತ್ತೆಂಟರಲ್ಲಿ ಹುಟ್ಟಿದನು. ಇವನ ಮೊದಲ ಹೆಸರು 'ಮಹೇಶ್ವರ ದಾಸ' ಎಂಬುದಾಗಿತ್ತು. ಚಿಕ್ಕಂದಿನಿಂದಲೂ ಇವನು ಹಾಸ್ಯಗಾರನೂ, ಒಳ್ಳೆಯ ರಸಿಕನೂ ಆಗಿದ್ದನು. ದೈವಭಕ್ತಿ ಇವನಲ್ಲಿ ಸಹಜವಾಗಿದ್ದಿತು. ಬಡತನದಲ್ಲಿಯೇ ವಿದ್ಯೆ ಕಲಿತು ವಿದ್ವಾಂಸನಾದನು.



ಹುಲಿಯೊಂದಿಗೆ ಬೀರಬಲ್‌ನ ಹೋರಾಟ

ಒಂದಾನೊಂದು ದಿವಸ ದೇವಸ್ಥಾನದಲ್ಲಿ ವಿದ್ಯಾಭ್ಯಾಸ ಮಾಡುವ ಕಾಲಕ್ಕೆ ಒಂದು ಹೆಬ್ಬುಲಿಯು ಆರ್ಭಟಿಸುತ್ತಾ ದೇವಸ್ಥಾನದೊಳಗೆ ಪ್ರವೇಶ ಮಾಡಿತು. ಅಲ್ಲಿದ್ದ ಹಲವಾರು ಜನರು ಗಾಬರಿಯಾದರು. ದೇವಸ್ಥಾನದಲ್ಲಿದ್ದ ಗುರುವರ್ಗ ಬೀರಬಲ್‌ನಿಗೆ "ನಮ್ಮ ಪ್ರಾಣವನ್ನು ನೀನೇ ಕಾಪಾಡಬೇಕು, ನಮಗೆ ಭಯವಾಗುತ್ತಿದೆ" ಎಂದು ಚೀರಾಡಲಿಕ್ಕೆ ಹತ್ತಿದರು. ಆಗ ಬೀರಬಲ್ಲನು ಹುಲಿಯನ್ನು ಕೊಲ್ಲಬೇಕೆಂದು ಮನದಲ್ಲಿ ನಿರ್ಧಾರಮಾಡಿ 'ಬಲವೀರ ಸಮರ್ಥ' ಎಂದು ದೊಡ್ಡ ಧ್ವನಿ ತೆಗೆದು, ಹಸಿದು ಬಂದ ಹುಲಿಯನ್ನು ಎದುರಿಸಿ ಕೊಂದು ಬಿಟ್ಟನು. ಅಂದಿನಿಂದ ಅವನಿಗೆ ಬೀರಬಲ್ಲನೆಂಬ ಹೆಸರು ಬಂತು.

ಇದೊಂದು ಕಥೆಯಾದರೆ ಮತ್ತೊಂದು ಕಥೆಯಲ್ಲಿ ಹೀಗಿದೆ. ಬೀರ್‌ಬಲ್ಲನಿಗೆ ಚಿಕ್ಕಂದಿನಿಂದ ಬೇಟೆಯಲ್ಲಿ ಆಸಕ್ತಿ. ಒಮ್ಮೆ ಬೇಟೆಗಾರರ ತಂಡದೊಡನೆ ಬೇಟೆಯಾಡಲು ಹೋದಾಗ ಹೆಬ್ಬುಲಿ ಎದುರಾಯಿತು. ಅದನ್ನು ಎದುರಿಸುವ ಧೈರ್ಯ ಯಾರಲ್ಲೂ ಕಂಡುಬರಲಿಲ್ಲ. ಆಗ ತಂಡದಲ್ಲಿದ್ದ ಬೀರ್‌ಬಲ್ಲನು ಕೈಗತ್ತಿಯೊಂದನ್ನು ತೆಗೆದುಕೊಂಡನು. ಹುಲಿಯ ಮೇಲೆ ಕಲ್ಲೊಗೆದು ಅದನ್ನು ರೊಚ್ಚಿಗೆಬ್ಬಿಸಿದನು. ಆಗ ಹುಲಿಯು ಠಣ್ಣನೆ ಜಿಗಿದು ನೆಗೆದಾಗ ತನ್ನ ಕತ್ತಿಯಿಂದ ಒಂದೇ ಏಟಿಗೆ ಅದರ ಹೊಟ್ಟೆ ಸೀಳಿದನು. ಅದು ನೆಲಕ್ಕೆ ಬಿದ್ದ ಕೂಡಲೇ ಮತ್ತೊಂದು ಹೊಡೆತದಿಂದ ಅದರ ಪ್ರಾಣ ತೆಗೆದನು. ಅಲ್ಲಿ ಕೂಡಿದ್ದ ಬೇಡರೆಲ್ಲಾ ಬ್ರಾಹ್ಮಣನ ಶೂರತನಕ್ಕೆ ದಂಗಾದರು. ಅವನ ಧೈರ್ಯವನ್ನು ಹೊಗಳಿ ಸುತ್ತಲಿನ ಹಳ್ಳಿಗಳಲ್ಲೆಲ್ಲಾ ಮೆರೆಯಿಸಿದರು. ಜನರೆಲ್ಲಾ ಇವನನ್ನು 'ಭಲೇ ಬೀರ' ಎಂದು ಜೈಕಾರ ಹಾಕಿ ಗೌರವಿಸಿದರು.

ಅಂದಿನಿಂದ ಇವನಿಗಿದ್ದ 'ಮಹೇಶ್ವರ ದಾಸ' ಎಂಬ ಹೆಸರು ಹಿಂದಾಗಿ, 'ಬೀರ್‌ಬಲ್' ಎಂಬ ಹೆಸರು ಮುಂದಾಯಿತು.

ಒಟ್ಟಾರೆ ಈ ಕಥೆಗಳು ಬೀರಬಲ್ ಕೇವಲ ಮಾತಿನ ಚತುರ ಮಾತ್ರವಲ್ಲ, ಶೂರ ಪರಾಕ್ರಮಿಯೂ ಆಗಿದ್ದನೆಂದು ಹೇಳುತ್ತವೆ. ಶೂರ, ಚಾಣಾಕ್ಷ, ಕವಿ ನಿಪುಣನೂ ಆಗಿದ್ದ ಬೀರಬಲ್‌ನಿಗೆ ಹೋಲಿಸಬಹುದಾದ ಮತ್ತೊಬ್ಬ ವ್ಯಕ್ತಿಯೆಂದರೆ ವಿಜಯನಗರದ ಅರಸ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ತೆನಾಲಿ ರಾಮಕೃಷ್ಣ. ಬೀರಬಲ್‌ನಂತೆ ರಾಮಕೃಷ್ಣನೂ ಆಸ್ಥಾನ ವಿದೂಷಕನಾಗಿದ್ದವನು. ಇವರಿಬ್ಬರೂ ಒಂದು ರೀತಿಯಲ್ಲಿ ಸಮಾಜದಲ್ಲಿ ರಾವುಗನ್ನಡಿ ಹಾಗೆ ಇದ್ದವರು. ತಮ್ಮ ಚತುರತೆಯಿಂದ ಸಮಾಜದಲ್ಲಿನ ಅನೇಕ ಓರೆ-ಕೋರೆಗಳನ್ನು ತಿದ್ದಿದವರು ಎನ್ನಬಹುದು.

ಮುಸಲ್ಮಾನ ರಾಜನಾಗಿದ್ದರೂ ಧರ್ಮದಲ್ಲಿ ಭೇದವೆಣಿಸದೆ ಇದ್ದವನು ಅಕಬರ ಎಂಬುದನ್ನು ಹಿಂದೆಯೇ ಓದಿದ್ದೇವೆ. ಬೀರಬಲ್‌ನ ಪ್ರತಿಭೆಯನ್ನು ಅರಿತಿದ್ದ ರಾಜ ಅಕಬರನು, ಇತರ ಮುಸಲ್ಮಾನ ಮಂತ್ರಿಗಳಿಗಿಂತ ಬೀರಬಲ್ಲನಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿದ್ದನು. ಇತರ ಮಂತ್ರಿಗಳಿಗೆ ರಾಜ ಹಾಗೂ ಬೀರಬಲ್ಲರ ಸ್ನೇಹ ಸಂಬಂಧ ಹೊಟ್ಟೆಯುರಿಗೆ ಕಾರಣವಾಗಿತ್ತು. ಇವರು ರಾಜನಿಗೆ ಬೀರಬಲ್‌ನ ಮೇಲೆ ದ್ವೇಷ ಮೂಡಿಸಲು ನಾನಾ ರೀತಿ ಸಂಚು ನಡೆಸುತ್ತಿದ್ದರು. ಈ ವಿಚಾರವೇ ಅನೇಕ ಕಥೆಗಳ ವಸ್ತುವಾಗಿದೆ. "ಕ್ಷೌರಿಕನ ಪಾಡು" ಎಂಬ ಕಥೆ ಇಂತಹ ಒಂದು ಸಂಚನ್ನು ಕುರಿತು ಹೇಳುತ್ತದೆ.

ಕ್ಷೌರಿಕನ ಪಾಡು



ಕ್ಷೌರಿಕ ಬೀರ್‌ಬಲ್‌ನ ವಿರುದ್ಧ ಪಿತೂರಿ ಮಾಡುತ್ತಿರುವುದು

ಅಕಬರನ ದರ್ಬಾರಿನ ಕೆಲವು ಮಂತ್ರಿಗಳಿಗೆ ಬೀರಬಲ್ಲನ ಪ್ರಸಿದ್ಧಿಯನ್ನು ಕಂಡು ಸಹಿಸಲಾರದಾಗಿತ್ತು. ಅವರೆಲ್ಲಾ ಒಳಗೊಳಗೆ ಬೀರಬಲ್ಲನನ್ನು ದ್ವೇಷಿಸುತ್ತಿದ್ದರು. ಹೊರಗೆ

ಮಾತ್ರ ಅವನನ್ನು ಹೊಗಳುತ್ತಿದ್ದರು. ಒಮ್ಮೆ ಅವರೆಲ್ಲಾ ಸೇರಿ ರಾಜನಿಗೆ ಹತ್ತಿರವಾಗಿದ್ದ ಒಬ್ಬನಿಂದ ತಮ್ಮ ಸಂಚಿಗಾಗಿ ನೆರವು ಪಡೆಯಲು ಯೋಚಿಸಿದರು.

ಚಕ್ರವರ್ತಿಗೆ ಅತ್ಯಂತ ಸಮೀಪದವನಾಗಿ ಒಬ್ಬ ಕ್ಷೌರಿಕನಿದ್ದ. ಅವನು ಅವರಿಗೆ ಸಹಾಯ ಮಾಡಲು ಒಪ್ಪಿದನು. ಅವರು ತೋರಿಸಿದ ಹಣದ ಆಸೆಗೆ ಮರುಳಾದ.

ಎಲ್ಲರೂ ಸೇರಿ ಹೇಗಾದರೂ ಮಾಡಿ ಬೀರಬಲ್‌ನನ್ನು ಮುಗಿಸಿಬಿಡಬೇಕೆಂದು ಯೋಜನೆ ಹಾಕಿದರು. ಬೀರಬಲ್ ಕಣ್ಣಮುಂದೆ ಇರಬಾರದು. ಈ ಪ್ರಪಂಚವನ್ನೇ ಬಿಟ್ಟು ಹೋಗಬೇಕು ಎಂಬುದು ಅವರ ನಿರ್ಧಾರವಾಗಿತ್ತು.

ಒಂದು ದಿನ ರಾಜನು ನಗುನಗುತ್ತಾ ಪ್ರಸನ್ನನಾಗಿದ್ದಾಗ ಕ್ಷೌರಿಕ ರಾಜನ ಮುಖಕ್ಷೌರ ಮಾಡುತ್ತಾ,

"ಹುಜೂರ್! ನಿಮಗೆ ಗೊತ್ತಿಲ್ಲದಿರಬಹುದು. ನನಗೂ ವಯಸ್ಸಾಯಿತು ಎಂಬುದನ್ನು ನೀವು ಬಲ್ಲಿರಿ. ನಿಮ್ಮ ತಂದೆ ಹುಮಾಯೂನರಿಗೂ ನಾನೇ ಕ್ಷೌರ ಮಾಡುತ್ತಿದ್ದೆ. ಆಹಾ! ಅವರ ಕೂದಲು ಹೇಗಿತ್ತು ಗೊತ್ತೆ? ರೇಶಿಮೆಯಂತೆ ಮೃದು!" ಎಂದು ಹೇಳಿದ.

ರಾಜನು "ಇದ್ದಿರಬಹುದು" ಎಂದ. "ಬಹುದು ಏನು ಪ್ರಭು! ನಿಜವಾಗಿಯೂ ಅವರ ಕೂದಲು ಅಷ್ಟು ನಯವಾಗಿತ್ತು. ಹೌದು! ನಿಮ್ಮನ್ನು ಒಂದು ಪ್ರಶ್ನೆ ಕೇಳಬಹುದೆ?" ಎಂದ ಕ್ಷೌರಿಕ ಗಡ್ಡ ಕೆರೆಯುತ್ತಾ. "ಕೇಳಯ್ಯಾ" ಎಂದ ರಾಜ. "ಇನ್ನೇನಿಲ್ಲ ಹುಜೂರ್! ನೀವು ಇಷ್ಟೊಂದು ಭೋಗ ಭಾಗ್ಯಗಳನ್ನು ಅನುಭವಿಸುತ್ತಿದ್ದೀರಲ್ಲಾ, ಅದೇ ನಿಮ್ಮ ತಂದೆ ಸ್ವರ್ಗದಲ್ಲಿ ಹೇಗಿದ್ದಾರೆ ಎಂದು ಯೋಚಿಸಿದ್ದೀರಾ?"

"ಹೋಗೋ ಹುಚ್ಚ! ಎಲ್ಲೋ ಶುದ್ಧ ಮೂರ್ಖ ನೀನು. ಅದನ್ನೆಲ್ಲಾ ಯಾರಾದರೂ ವಿಚಾರಿಸುವರೇನೋ?"

"ಯಾಕೆ ವಿಚಾರಿಸಬಾರದು"

"ಏನು ಹಾಗೆಂದರೆ?" ಅಕಬರ ಕುಪಿತನಾದ.

"ಹುಜೂರ್! ನಿಮಗೆ ತಿಳಿಯದಿರಬಹುದು. ಆದರೆ ನನಗೊಬ್ಬ ಮಂತ್ರವಾದಿ ಗೊತ್ತು. ಅವನು ಇಂತಹಾ ಮಾಹಿತಿಯನ್ನೆಲ್ಲಾ ಒದಗಿಸಬಲ್ಲ"

"ಹೌದೇ?!"

"ಅದೇನೂ ಅಷ್ಟು ಕಷ್ಟವಲ್ಲ ಖಾವಂದ್! ಈಗ ನೋಡಿ. ನಿಮ್ಮ ಹಿರಿಯರು ಹೇಗಿದ್ದಾರೆ ಅನ್ನೋದನ್ನ ಜೀವಸಹಿತ ಸ್ವರ್ಗಕ್ಕೆ ಹೋಗಿ ತಿಳಿದು ಬರಬಹುದು. ಆ ಮಾಂತ್ರಿಕ ಇದಕ್ಕೆ ಅವಕಾಶ ಮಾಡಿಕೊಡುತ್ತಾನೆ ನೋಡಿ"

"ಅದು ಸಾಧ್ಯವಿದ್ದರೆ, ಈಗಲೇ ಎಲ್ಲ ವ್ಯವಸ್ಥೆಗಳನ್ನೂ ಮಾಡು. ನನ್ನ ತಂದೆ ವಿಷಯ ತಕ್ಷಣ ನನಗೆ ತಿಳಿಯಲಿ" ಎಂದ ಅಕಬರ್.

"ಹಾಗೆ ಹೇಳಿ ಮತ್ತೆ. ನಾನು ಮಾಡುತ್ತೇನೆ. ಆದರೆ ಸ್ವರ್ಗದಿಂದ ಇಂತಹಾ ಮುಖ್ಯವಾದ ಮಾಹಿತಿ ತರಿಸಬೇಕಾದರೆ ನಾವು ಜವಾಬ್ದಾರಿ ಇರುವ ಹಾಗೂ ಅನುಭವ ಉಳ್ಳ ವ್ಯಕ್ತಿಯನ್ನು ಇದಕ್ಕೆ ಕಳುಹಿಸಬೇಕಾಗುತ್ತಲ್ಲ"

"ಹೌದಯ್ಯಾ! ನೀನು ಹೇಳೋದು ನಿಜ. ಆದರೆ ಅಂತಹವರು ಯಾರಿದ್ದಾರೆ ನಮ್ಮಲ್ಲಿ"

"ಇನ್ನಾರು ಹುಜೂರ್! ಬೀರಬಲ್"

"ಬೀರಬಲ್‌ನೇ! ಹೌದು, ಬೀರಬಲ್ ಯಾಕೆ ಹೋಗಬೇಕು ಈ ಕೆಲಸಕ್ಕೆ"

"ಪ್ರಭು! ಬೀರಬಲ್‌ನಷ್ಟು ಚತುರರು ಯಾರಿದ್ದಾರೆ ನಮ್ಮ ರಾಜ್ಯದಲ್ಲಿ? ಅಲ್ಲದೆ ಸ್ವರ್ಗಕ್ಕೆ ಹೋಗುವ ವ್ಯಕ್ತಿ ನಿಮ್ಮ ತಂದೆಯವರ ಯೋಗಕ್ಷೇಮ ವಿಚಾರಿಸುವಂತವನಾಗಿರಲೂ ಬೇಕು. ಅದೂ ಅಲ್ಲದೆ ನಾನು ತೋರಿಸುವ ಮಾಂತ್ರಿಕನನ್ನು ಸಂಪರ್ಕಿಸುವಷ್ಟು ಬುದ್ಧಿವಂತನೂ ಆಗಿರಬೇಕು. ಬೀರಬಲ್ ಮಾತ್ರ ಈ ಕೆಲಸ ಮಾಡಲು ಸಾಧ್ಯ"

ಕ್ಷೌರಿಕನ ಮಾತು ಕೇಳಿದ ರಾಜನು, ಅವರ ಸಂಚನ್ನು ಗ್ರಹಿಸಿದ. "ಸರಿ, ಹಾಗಾದರೆ, ಈ ಕೆಲಸಕ್ಕೆ ಬೀರಬಲ್‌ನನ್ನೇ ನೇಮಿಸೋಣ. ಆದರೆ ಅದಕ್ಕೆ ನಾನೇನು ಮಾಡಬೇಕೀಗ?" ಎಂದು ಕೇಳಿದ.

"ಇನ್ನೇನು ಹೆಚ್ಚಿಗೆ ಮಾಡಬೇಕಿಲ್ಲ ಹುಜೂರ್, ಬೀರಬಲ್‌ನನ್ನು ನಾವು ಮೆರವಣಿಗೆಯಲ್ಲಿ ಸ್ಮಶಾನಕ್ಕೆ ಕರೆದೊಯ್ಯೋಣ. ಚಿತೆ ಸಿದ್ಧ ಮಾಡೋಣ. ನನ್ನ ಸ್ನೇಹಿತ ಮಂತ್ರಗಳನ್ನು ಹೇಳುತ್ತಾನೆ. ಬೀರಬಲ್ಲರು ಚಿತೆಯ ಮೇಲೆ ಕೂರಲಿ. ಚಿತೆಗೆ ಬೆಂಕಿ ಇಟ್ಟರೂ ಅದು ಬೀರಬಲ್ಲರನ್ನು ತಾಗುವುದಿಲ್ಲ. ಹೊಗೆಯ ಮೂಲಕ ಅವರು ಸ್ವರ್ಗ ಸೇರಬಲ್ಲವರಾಗುತ್ತಾರೆ. ಅವರಿಗೆ ಸ್ವಲ್ಪವೂ ಗಾಯವಾಗುವುದಿಲ್ಲ".

ಕ್ಷೌರಿಕ ಹೇಳಿದುದನ್ನು ಒಪ್ಪಿದ ರಾಜನು ಮರುದಿನ ಬೀರಬಲ್ ಆಸ್ಥಾನಕ್ಕೆ ಬಂದಾಗ "ಸ್ವರ್ಗಕ್ಕೆ ಹೋಗಲು ಸಿದ್ಧನಾಗು" ಎಂದು ಹೇಳಿದ. ಬೀರಬಲ್‌ಗೆ, ಚಕ್ರವರ್ತಿ ಹೀಗೇಕೆ ಹೇಳಿದನೆಂಬುದು ಅರ್ಥವಾಗಲೇ ಇಲ್ಲ. ಆದರೆ ಅಕಬರ ಈ ರೀತಿಯ ವಿಧಾನವನ್ನು ತಮಗೆ ತನ್ನ ಕ್ಷೌರಿಕನು ಹೇಳಿದನೆಂದು ನುಡಿದ ಬಳಿಕ ಮಂತ್ರಿಗಳು ಮಾಡಿದ ಸಂಚನ್ನು ಅರ್ಥ ಮಾಡಿಕೊಂಡ ಬೀರಬಲ್, ತಾನು ಸ್ವರ್ಗಕ್ಕೆ ಹೋಗಿ ಬರಲು ಒಪ್ಪಿಗೆ ನೀಡಿದ.

"ಸರ್ಕಾರ್! ನಾನೇನೋ ಸ್ವರ್ಗಕ್ಕೆ ಹೋಗುತ್ತೇನೆ. ಆದರೆ ಇದು ಬಹುದೂರದ ಪ್ರಯಾಣ. ನನಗೂ ಹೆಂಡತಿ ಮಕ್ಕಳಿದ್ದಾರೆ. ಅವರಿಗೆಲ್ಲ ಒಂದು ನೆಲೆ ಮಾಡಿ ನಾನು ಊರು ಬಿಡಬೇಕು. ನನಗೆ ಹಣ ಬೇಕಾಗುತ್ತದೆ" ಎಂದು ಬೀರಬಲ್ ಹೇಳಿದ.


"ಅಲ್ಲವೇ ಮತ್ತೆ, ನೀನು ಮನೆ ಕಡೆ ಎಲ್ಲ ವ್ಯವಸ್ಥೆ ಮಾಡಿಯೇ ಹೋಗುವಿಯಂತೆ. ಇದಕ್ಕೆ ನಿನಗೆ ಎಷ್ಟು ವೇಳೆಯಾಗುತ್ತದೆ"

"ಸುಮಾರು ಒಂದು ತಿಂಗಳಾಗುತ್ತದೆ" ಬೀರಬಲ್ ಉತ್ತರಿಸಿದ.

"ಬೀರಬಲ್, ನನಗೆ ನನ್ನ ತಂದೆಯ ಯೋಗಕ್ಷೇಮ ತಿಳಿಯಬೇಕೆಂಬ ಆತುರ ಹೆಚ್ಚಿದೆ. ನೀನು ಒಂದು ತಿಂಗಳ ಬಳಿಕ ಸ್ವರ್ಗಕ್ಕೆ ಹೋಗಿ ವಿಷಯ ತಿಳಿದೇ ಬರಬೇಕು. ನಿನಗೆಷ್ಟು ಹಣ ಬೇಕೋ ಅಷ್ಟು ತೆಗೆದುಕೋ" ಎಂದು ಅಕಬರ ಅಪ್ಪಣೆ ನೀಡಿದ.

"ಖಂಡಿತವಾಗಿ ಹುಜೂರ್! ನಿಮಗೆ ಖಂಡಿತವಾಗಿಯೂ ನಾನು ಸುದ್ದಿ ಮುಟ್ಟಿಸುತ್ತೇನೆ". ಎಂದು ಹೇಳಿದ ಬೀರಬಲ್ ಮನೆ ಸೇರಿದ. ಕ್ಷೌರಿಕನ ಸಂಚು ಅವನಿಗೆ ಅರ್ಥವಾಗಿತ್ತಲ್ಲ! ಥಟ್ಟನೆ ಒಂದು ಉಪಾಯ ಹೂಡಿದ.

ತನ್ನ ಮನೆಯಿಂದ ಸ್ಮಶಾನದವರೆಗೆ ಒಂದು ಸುರಂಗ ತೋಡಿಸಿದ. ಗೊತ್ತು ಪಡಿಸಿದ ದಿನದಂದು ಬೀರಬಲ್ ಅಕಬರನನ್ನು ಕಂಡು ತಾನು ಸ್ವರ್ಗಕ್ಕೆ ಹೋಗಲು ಸಿದ್ಧನಿರುವುದಾಗಿ



ರಹಸ್ಯ ದ್ವಾರದ ಮೂಲಕ ಬೀರಬಲ್ ತಪ್ಪಿಸಿಕೊಳ್ಳುತ್ತಿರುವುದು

ಹೇಳಿದ. ರಾಜನು ತನಗೆ ತನ್ನ ತಂದೆಯ ಸುದ್ದಿ ತಿಳಿದರೆ ಸಾಕೆಂದು ಎಲ್ಲ ಏರ್ಪಾಡುಗಳನ್ನೂ ಮಾಡಿಸಿದ. ಬೀರಬಲ್‌ನನ್ನು ಮೆರವಣಿಗೆಯಲ್ಲಿ ಸ್ಮಶಾನಕ್ಕೆ ಒಯ್ಯಲಾಯಿತು. ಚಿತೆಯ ಮೇಲೆ ಕೂರಿಸಲಾಯಿತು. ಬೀರಬಲ್ ಸ್ವರ್ಗಕ್ಕೆ ಹೋಗುವ ಸಲುವಾಗಿ ವಿಶೇಷ ಪೋಷಾಕು ಧರಿಸಿ ಬಂದಿದ್ದ.

ಮಂತ್ರವಾದಿ ಮಂತ್ರಗಳನ್ನು ಪಠಿಸುತ್ತಿದ್ದಂತೆ ಚಿತೆಗೆ ಬೆಂಕಿ ಹಚ್ಚಲಾಯಿತು. ಕ್ಷೌರಿಕ ಮತ್ತು ಅವನೊಂದಿಗೆ ಈ ಸಂಚಿಗೆ ಕೈಹಾಕಿದವರು ಇದೇ ಬೀರಬಲ್‌ನ ಕೊನೆಯ ದರ್ಶನವೆಂದು ಭಾವಿಸಿದರು.

ಹೊಗೆ ಮೇಲೇಳುತ್ತಿದ್ದಂತೆ ಬೀರಬಲ್ ಸುರಂಗಕ್ಕೆ ಜೋಡಿಸಿದ್ದ ರಹಸ್ಯ ಬಾಗಿಲನ್ನು ತೆರೆದು ಒಳಗಿಳಿದು ನೇರ ಮನೆ ತಲುಪಿದ.

ಕೆಲವು ತಿಂಗಳುಗಳು ಬೀರಬಲ್ ರಹಸ್ಯವಾಗಿಯೇ ಇದ್ದು, ಗಡ್ಡ ಮೀಸೆಗಳನ್ನು ಬೆಳೆಸಿದ. ಒಂದು ದಿನ ಬೆಳಿಗ್ಗೆ ರಾಜನಿದ್ದ ಸಭೆಗೆ ಬಂದ.

ರಾಜ ಅಕಬರ, ಬೀರಬಲ್‌ನನ್ನು ಕಾಣುತ್ತಿದ್ದಂತೆ ಸಿಂಹಾಸನದಿಂದ ಎದ್ದು ಓಡಿ ಬಂದು ಅವನನ್ನು ಸ್ವಾಗತಿಸಿದ.

"ಸದ್ಯ ನೀನು ಬಂದೆಯಲ್ಲ. ಬೀರಬಲ್ ಪ್ರಯಾಣ ಹೇಗಿತ್ತು? ನನ್ನ ತಂದೆ ಹುಮಾಯೂನ್ ಪ್ರಭುಗಳು ಹೇಗಿದ್ದಾರೆ?"

"ನಾನು ಸುಖವಾಗಿದ್ದೇನೆ. ಆದರೆ ನನ್ನ ಪ್ರಯಾಣವನ್ನೇಕೆ ಕೇಳುತ್ತೀರಿ. ಆದರೂ ಹೇಗೋ ಸುಧಾರಿಸಿಕೊಂಡು ಬಂದೆ. ನಿಮ್ಮ ತಂದೆ ಆನಂದವಾಗಿ ಸುಖದಿಂದಿದ್ದಾರೆ. ಆದರೆ ಒಂದೇ ಒಂದು ಕೊರತೆ"

"ಕೊರತೆಯೇ? ಏನದು!?"

"ಸರ್ಕಾರ್! ಅವರಿಗೆ ತಿನ್ನಲು ಒಳ್ಳೆ ಆಹಾರವಿದೆ. ಉಡಲು ಒಳ್ಳೆ ಬಟ್ಟೆಗಳಿವೆ. ಆಳು ಕಾಳುಗಳಿದ್ದಾರೆ. ಆದರೆ ಒಂದೇ ಒಂದು ದುಃಖ ಅವರನ್ನು ಬಾಧಿಸುತ್ತಿದೆ"

"ಅದೇನು ಹೇಳು ಬೀರಬಲ್"

"ಅಯ್ಯೋ! ಅದು ಅಷ್ಟು ಸುಲಭವಾಗಿ ಪರಿಹಾರವಾಗುವುದಿಲ್ಲ. ನನ್ನ ಒತ್ತಾಯದ ಮೇರೆಗೆ ಅವರು ಹೇಳಿದರು. ಅವರಿಗಂತೂ ಇದು ಪರಿಹಾರವಾಗದ ಸಮಸ್ಯೆಯೇ ಆಗಿದೆ."

"ಬೀರಬಲ್! ಸುಮ್ಮನೆ ಸುತ್ತಿ ಬಳಸಿ ಮಾತನಾಡಬೇಡ ಬೇಗ ಹೇಳು. ನನ್ನ ತಂದೆಯ ಬಯಕೆಯಾದರೂ ಏನು? ಈಗಂತೂ ನಮಗೆ ಸ್ವರ್ಗಕ್ಕೆ ಹೋಗುವ ವಿಧಾನ ತಿಳಿದೇಯಿದೆ. ನಾವು ಇಲ್ಲಿಂದ ಏನು ಬೇಕಾದರೂ ಕಳುಹಿಸಬಹುದು"

"ಸರ್ಕಾರ್ ನಿಮ್ಮ ತಂದೆಗೆ ಎಲ್ಲವೂ ಧಾರಾಳವಾಗಿ ಸಿಗುತ್ತಿದೆಯಂತೆ. ಆದರೆ ಮುಖಕ್ಷೌರ ಮಾಡುವವರು ಯಾರೂ ಇಲ್ಲವಂತೆ"

"ಯಾಕೆ! ಇಲ್ಲಿಂದ ಸತ್ತಮೇಲೆ ಯಾವ ಕ್ಷೌರಿಕನೂ ಸ್ವರ್ಗಕ್ಕೆ ಹೋಗಿಲ್ಲವೇ?"

"ಸರ್ಕಾರ್! ಹಾಗೆ ಯಾರಾದರೂ ಕ್ಷೌರಿಕರು ಹೋಗಿದ್ದರೆ ಅವರಿಗೇಕೆ ಈ ಕಷ್ಟವಿರುತ್ತಿತ್ತು. ನಾನು ಅವರನ್ನು ಗುರುತಿಸುವುದೇ ಕಷ್ಟವಾಯಿತು. ಅವರು ನೀಳವಾದ ಗಡ್ಡ ಬಿಟ್ಟಿದ್ದಾರೆ. ನಾನು ಹೇಗೋ ಕಷ್ಟಪಟ್ಟು ಅವರನ್ನು ಗುರುತಿಸಿದೆ. ಅಷ್ಟೇ ಯಾಕೆ? ನನ್ನನ್ನೇ ನೋಡಿ! ಅಲ್ಲಿ ಯಾವ ಕ್ಷೌರಿಕನೂ ಸಿಗದೆ ಮುಖದ ತುಂಬಾ ಗಡ್ಡ ಮೀಸೆಗಳು ಹೇಗೆ ಬೆಳೆದುಕೊಂಡಿದೆ? ನಿಮ್ಮ ತಂದೆ ಒಂದು ಬೇಡಿಕೆ ಮುಂದಿಟ್ಟಿದ್ದಾರೆ.

"ಏನದು?"

"ಸಾಧ್ಯವಿದ್ದರೆ ನನ್ನ ಮಗನಿಗೆ ಹೇಳಿ ಕುಟುಂಬ ಕ್ಷೌರಿಕನೊಬ್ಬನನ್ನು ಸ್ವರ್ಗಕ್ಕೆ ಕಳುಹಿಸಬೇಕಂತೆ".

"ಬೀರಬಲ್! ಮಗನಾಗಿ ನಾನು ಅಷ್ಟು ಮಾಡಲಾರೆನೆ? ನಮ್ಮ ತಂದೆಯ ಮುಖಕ್ಷೌರಕ್ಕಾಗಿ ನಾನು ನನ್ನ ಕುಟುಂಬದ ಕ್ಷೌರಿಕನನ್ನೇ ಕಳುಹಿಸುತ್ತೇನೆ."

ಹೀಗೆ ಹೇಳಿದ ಅಕಬರ ಕ್ಷೌರಿಕನನ್ನು ಹಾಗೂ ಅವನ ಮಾಂತ್ರಿಕ ಗೆಳೆಯನನ್ನೂ ಬರಮಾಡಿಕೊಂಡನು. ಕ್ಷೌರಿಕ ಸ್ವರ್ಗಕ್ಕೆ ಹೋಗಲು ಸಿದ್ಧನಾಗಬೇಕೆಂದು ಹೇಳಿದನು.

ಕ್ಷೌರಿಕನಿಗೆ ಬೀರಬಲ್ಲನು ತಾನು ಬೀಸಿದ ಬಲೆಯಲ್ಲಿ ತನ್ನನ್ನೇ ಹೇಗೆ ಸಿಕ್ಕಿಸಿದನೆಂಬುದು ಅರ್ಥವಾಗಿಹೋಯಿತು. ಆದರೆ ಕ್ಷೌರಿಕ ಏನೂ ಮಾಡುವಂತಿರಲಿಲ್ಲ. ರಾಜನ ಅಪ್ಪಣೆಯಂತೆ ಚಿತೆಯ ಮೇಲೆ ಕೂರಿಸಿ ಬೆಂಕಿ ಹಚ್ಚಲಾಯಿತು. ಅದರಲ್ಲಿ ಜೀವಸಹಿತ ಕ್ಷೌರಿಕ ಬೆಂದು ಹೋದ.

ಈ ಘಟನೆಯ ನಂತರ ಮುಂದೆ ಯಾರೂ ಬೀರಬಲ್‌ನ ತಂಟೆಗೆ ಹೋಗುವ ಧೈರ್ಯ ಮಾಡುತ್ತಿರಲಿಲ್ಲ.

ಹಾಸಿಗೆ ಇದ್ದಷ್ಟು ಕಾಲುಚಾಚು

ರಾಜ ಅಕಬರನಿಗೂ, ಉಳಿದ ಮಂತ್ರಿಗಳು ಬೀರಬಲ್ಲನ ಬಗೆಗೆ ಪಡುವ ಹೊಟ್ಟೆಯುರಿಯ ಅರಿವಿದ್ದಿರಬಹುದು. ಅದನ್ನು ಹೋಗಲಾಡಿಸಲು ರಾಜನು ಪ್ರಯತ್ನಪಟ್ಟಿರುವ ವಿಚಾರ ಹಲವಾರು ಕಥೆಗಳಲ್ಲಿ ಬಂದಿದೆ.

ಅಕಬರ ಇತರ ಮಂತ್ರಿಗಳಿಗೆ ಬುದ್ಧಿಕಲಿಸುವ ಉದ್ದೇಶದಿಂದ ಸಣ್ಣ ಶಾಲೊಂದನ್ನು ತಂದು "ನಾನೀಗ ಈ ಹಾಸಿಗೆ ಮೇಲೆ ಮಲಗಿಕೊಳ್ಳುತ್ತೀನಿ. ನನ್ನ ದೇಹದ ಯಾವ ಭಾಗವೂ ಹೊರಗೆ ಕಾಣದ ಹಾಗೆ ಈ ಶಾಲನ್ನು ನನಗೆ ಹೊದಿಸಿ ನೋಡೋಣ" ಎಂದನು.

ಅಕಬರ ಕಾಲನ್ನು ಉದ್ದವಾಗಿ ಚಾಚಿ ಮಲಗಿದ. ಶಾಲು ಗಿಡ್ಡವಾಗಿದ್ದರಿಂದ ಅದನ್ನು ಅವನಿಗೆ ಹೊದಿಸಿದಾಗ ಕಾಲುಗಳು ಹೊರಗೆ ಕಂಡವು. ಕಾಲು ಮುಚ್ಚಿದರೆ, ಕೈ ಮತ್ತು ತಲೆ ಹೊರಗೆ ಕಂಡುವು. ಮಂತ್ರಿಗಳು ವಿವಿಧ ರೀತಿಯ ಉಪಾಯ ಮಾಡಿದರೂ ಸರಿಯಾಗಿ ಹೊಂದಿಸಲಾರದೆ ಹೋದರು.

ಆಗ ಅಕಬರ "ಬೀರ್‌ಬಲ್‌ನನ್ನು ಕರೀರಿ. ಅವನ ಕೈಲಿ ಈ ಕೆಲಸವಾಗುತ್ತೋ ನೋಡೋಣ!" ಎಂದನು.

ತನ್ನ ವಿರುದ್ಧ ಸಂಚು ಮಾಡುತ್ತಿರುವುದನ್ನು ಅರಿತಿದ್ದ ಬೀರಬಲ್ ನಾಲ್ಕಾರು ದಿನಗಳಿಂದ ರಾಜಸಭೆಗೆ ಬಂದಿರಲಿಲ್ಲ. ರಾಜ ಹೇಳಿಕಳುಹಿಸಿದಾಗ ಅರಮನೆಗೆ ಬಂದ. ಅಕಬರನ ಆಪೇಕ್ಷೆಯನ್ನು ಕೇಳಿ ಒಂದು ನಿಮಿಷ ಯೋಚಿಸಿ, ರಾಜನ ಹತ್ತಿರ ಬಂದ. ಅವನ ಕಾಲುಗಳನ್ನೂ, ಕೈಗಳನ್ನೂ ಮಡಿಸಿ ಶಾಲು ಹೊದ್ದಿಸಿದ.

ಅಕಬರ ಸಿಟ್ಟು ನಟಿಸುತ್ತಾ ಹೇಳಿದ. "ಬೀರ್‌ಬಲ್ ನನ್ನ ಕೈಕಾಲುಗಳನ್ನು ನಿರ್ದಾಕ್ಷಿಣ್ಯವಾಗಿ ಮಡಿಸಿಬಿಟ್ಟೆಯಲ್ಲಾ! ನಿನಗೆ ಭಯವಿಲ್ಲವೇ?" ಬೀರಬಲ್ ಶಾಂತನಾಗಿ "ಭಯವೇಕೆ ಮಹಾಪ್ರಭೂ"? ಹಾಸಿಗೆ ಇದ್ದಷ್ಟು ಕಾಲುಚಾಚು ಅಂತ ಗಾದೆಯಿದೆ ನಮ್ಮಲ್ಲಿ. ಅದು ನಿಮಗೆ ಗೊತ್ತು ಎಂದು ಭಾವಿಸಿದ್ದೇನೆ. ನನ್ನದು ಅಪರಾಧವಾಗಿದ್ದರೆ ಕ್ಷಮಿಸಬೇಕು" ಎಂದು ನುಡಿದ.

ಅಕಬರ ನಸುನಕ್ಕು ಬೀರ್‌ಬಲ್‌ನ ಬುದ್ಧಿವಂತಿಕೆಗೆ ತಲೆದೂಗಿದ. ಉಳಿದವರು ನಾಚಿಕೆಯಿಂದ ತಲೆತಗ್ಗಿಸಿದರು.

ರಾಜಸಭೆಯಲ್ಲಿ ನಡೆಯುವ ಚರ್ಚೆಗಳಲ್ಲಿ ಎಲ್ಲರಿಗೂ ಸರಿಯೆನಿಸುವ ಉತ್ತರ ನೀಡಬಲ್ಲವನಾಗಿದ್ದ ಬೀರ್‌ಬಲ್. ಎಂತಹಾ ಕಷ್ಟದ ಸಮಸ್ಯೆಗಳಿಗೂ ಬೀರ್‌ಬಲ್‌ನಲ್ಲಿ ಪರಿಹಾರವಿತ್ತು. ಮಹಾನ್ ಪಂಡಿತರಿಗೇ ಸಾಧ್ಯವಾಗದಂತಹಾ ಕೆಲಸಗಳನ್ನು ಅವನು ಮಾಡಿ ತೋರಿಸುತ್ತಿದ್ದ. ತನ್ನ ಚತುರತೆಯಿಂದ ಎಷ್ಟೋ ಸಮಯದಲ್ಲಿ ರಾಜನ ಚಿಂತೆಯನ್ನು ದೂರ

ಮಾಡಿದವನು ಬೀರ್‌ಬಲ್. ಇಷ್ಟೇ ಅಲ್ಲ, ಪರದೇಶಗಳ ಎದುರಿಗೆ ದೇಶದ ಮಾನವನ್ನು ಕಾಪಾಡಿದವನು. 'ಕೊಡದೊಳಗಿನ ಬುದ್ಧಿವಂತಿಕೆ' ಎಂಬ ಕಥೆ ಇಂತಹಾ ಒಂದು ಸಂದರ್ಭವನ್ನು ಹೇಳುತ್ತದೆ.

ಬರಿಗೊಡದಲ್ಲಿ ಬುದ್ಧಿವಂತಿಕೆ

ಇರಾಣದ ಬಲ್ಕ ನಗರದ ಸುಲ್ತಾನನು ಅಕಬರನ ರಾಜ್ಯದ ಮೇಲೆ ತನ್ನ ಹಕ್ಕು ಸ್ಥಾಪಿಸುವ ಆಸೆಯುಳ್ಳವನಾಗಿದ್ದನು. ಇವನೊಮ್ಮೆ ತನ್ನ ಒಬ್ಬ ದೂತನಿಂದ ದಿಲ್ಲಿಯ ಅರಸನಾದ ಅಕಬರನಿಗೆ ಬರಿಗೊಡವನ್ನು ಕಳಿಸಿದ. "ಈ ಕೊಡದ ತುಂಬಾ ನಿಮ್ಮ ಜಾಣತನವನ್ನು ತುಂಬಿ ಕಳುಹಿಸಬೇಕು. ಸಾಧ್ಯವಿಲ್ಲದಿದ್ದರೆ ಸೋಲೊನ್ನೊಪ್ಪಿಕೊಳ್ಳಿ. ಒಂದು ವೇಳೆ ನೀವು ಗೆದ್ದರೆ ಪ್ರತಿಫಲವೆಂದು ಅರ್ಧಲಕ್ಷ ರೂಪಾಯಿಗಳನ್ನು ಕಳುಹಿಸಿ ನಿಮ್ಮ ಸ್ನೇಹ ಬೆಳಸಿಕೊಳ್ಳುವೆವು" ಎಂದು ಪತ್ರ ಕಳುಹಿಸಿದ್ದನು.

ಅಕಬರನು ಸ್ವಲ್ಪಕಾಲದ ಅವಕಾಶವನ್ನು ಯಾಚಿಸಿ ಉತ್ತರ ಬರೆದ. ದೂತನನ್ನು ಹಿಂದಿರುಗಿ ಕಳಿಸಿದನು.

ಅಕಬರ ಬೀರಬಲ್ಲರ ಸರಸ, ಸ್ನೇಹ, ನಾನಾ ಕಾರಣದಿಂದ ಎಷ್ಟೋಬಾರಿ ವಿರಸಕ್ಕೆ ತಿರುಗುತ್ತಿತ್ತು. ಬೀರಬಲ್ಲನು ತನ್ನ ಮಂತ್ರಿ ಪದವಿ ತ್ಯಾಗ ಮಾಡಿ ಹೋಗುವ ಪ್ರಸಂಗಗಳು ಆಗಾಗ ಉಂಟಾಗುತ್ತಿತ್ತು. ಈಗಲೂ ಹಾಗೆಯೇ ಆಗಿತ್ತು. ಬೀರ್‌ಬಲ್ಲನು ಎಲ್ಲೋ ಒಂದು ಹಳ್ಳಿಯಲ್ಲಿ ಯಾರಿಗೂ ತಿಳಿಯದಂತೆ ಗುಟ್ಟಾಗಿ ವೇಷಮರೆಸಿಕೊಂಡು ವಾಸವಾಗಿದ್ದನು. ಬೀರ್‌ಬಲ್ಲನು ಸತ್ತು ಹೋಗಿರುವನೆಂದು ಅವನ ವಿರೋಧಿಗಳು ಸುಳ್ಳು ಸುದ್ದಿಯನ್ನು ಹಬ್ಬಿಸಿದ್ದರು.

ರಾಜನ ಆಸ್ಥಾನದಲ್ಲಿದ್ದ ಯಾವ ಮಂತ್ರಿಗಳೂ ಬಲ್ಕಸುಲ್ತಾನನ ಸವಾಲಿಗೆ ತಕ್ಕ ಉತ್ತರವನ್ನು ಕೊಡಲು ಸಾಧ್ಯವಾಗಲಿಲ್ಲ. 'ಬೀರಬಲ್ಲನಿದ್ದರೆ ಈ ಪ್ರಸಂಗ ಬರುತ್ತಿದ್ದಿಲ್ಲ. ಅವನನ್ನು ದೂರಮಾಡಿ ನಾನು ಮೂರ್ಖನಾದೆ' ಎಂದು ರಾಜ ಪಶ್ಚಾತ್ತಾಪ ಪಡಹತ್ತಿದನು. ಅವನು ಬದುಕಿರಲೇಬೇಕೆಂದು ಭಾವಿಸಿ, ಅವನನ್ನು ಶೋಧಿಸಲು ನಾನಾ ಪ್ರಯತ್ನ ಮಾಡಿದನು. ಅಕಬರನು ಬೀರಬಲ್‌ನನ್ನು ಪತ್ತೆಹಚ್ಚಲು ಮಾಡಿದ ಉಪಾಯದ ಕಥೆ ಸ್ವಾರಸ್ಯವಾಗಿದೆ.

ಅಕಬರನು ರಾಜಧಾನಿಯ ಸುತ್ತಲಿದ್ದ ಹತ್ತು ಹಳ್ಳಿಗಳ ಪಟೇಲರನ್ನು ಕರೆದು "ನಾನು ನಿಮಗೆ ಒಂದೊಂದು ಮೇಕೆ ಕೊಡುತ್ತೇನೆ. ಅದಕ್ಕೆ ನನ್ನ ಖರ್ಚಿನಲ್ಲಿ ಚೆನ್ನಾಗಿ ಮೇವು ಹಾಕಿ. ಒಂದು ತಿಂಗಳ ನಂತರ ನೀವು ಅದನ್ನು ಹಿಂತಿರುಗಿಸಬೇಕು. ಆಗ ಅದರ ತೂಕ ಹೆಚ್ಚು ಆಗಿರಬಾರದು, ಕಡಿಮೆಯೂ ಆಗಿರಬಾರದು" ಎಂದು ಅಪ್ಪಣೆ ಮಾಡಿದ.

ಬೀರಬಲ್ಲ ಉಳಿದುಕೊಂಡಿದ್ದ ಹಳ್ಳಿಯ ಪಟೇಲ ಯೋಚಿಸುತ್ತಾ ಕುಳಿತಿದ್ದಾಗ ಬೀರಬಲ್ಲನೆಂದ "ಯೋಚಿಸಬೇಡಿ ಪಟೇಲರೇ ನಾನು ಹೇಳಿದ ಹಾಗೆ ಮಾಡಿ. ಮೇಕೆಗೆ ಹೊಟ್ಟೆತುಂಬಾ ಮೇವು ಹಾಕಿ"

"ಮೇವು ಹಾಕಿದರೆ ಮೇಕೆಯ ತೂಕ ಹೆಚ್ಚುತ್ತಲ್ಲಾ" ಎಂದ ಪಟೇಲ. "ಹೆಚ್ಚಲಿ, ಅದು ತಿಂದು ಆದ ಬಳಿಕ ಮೇಕೇನ ಹುಲಿಯ ಪಂಜರದ ಹೊರಗೆ ಕಟ್ಟಿ. ಹೆದರಿಕೆಯಿಂದ ಅದರ ತೂಕ ಕಡಿಮೆಯಾಗುತ್ತದೆ" ಎಂದು ಬೀರಬಲ್.

ಪಟೇಲ ಅದರಂತೆಯೇ ನಡೆದುಕೊಂಡ. ಒಂದು ತಿಂಗಳ ಬಳಿಕ ಎಲ್ಲರೂ ಮೇಕೆಗಳನ್ನು ಅರಸನ ಮುಂದೆ ತಂದರು. ಒಂದು ಮೇಕೆಯ ಹೊರತು ಉಳಿದೆಲ್ಲವೂ ಹೆಚ್ಚು ಅಥವಾ ಕಡಿಮೆ ತೂಕವಾಗಿದ್ದವು. ಇದು ಬೀರಬಲನ ಕೆಲಸವೇ ಇರಬೇಕೆಂದು ನಿಶ್ಚಯಿಸಿದ ಅಕಬರ. ತನ್ನ ದೂತರನ್ನು ಆ ಹಳ್ಳಿಗೆ ಅಟ್ಟಿ, ಕ್ಷಮೆ ಕೋರಿ ಬೀರಬಲ್ಲನ್ನು ಕರೆಸಿಕೊಂಡ.

ಬಹುದಿನದಿಂದ ದೂರಾಗಿದ್ದ ಬೀರಬಲ್ಲನು ರಾಜಸಭೆಯನ್ನು ಪ್ರವೇಶಿಸಿ ಸುತ್ತಲೂ ನೋಡುತ್ತಿದ್ದಾಗ ಒಂದು ಸ್ಥಳದಲ್ಲಿದ್ದ ಬರಿಗೊಡ ಅವನ ಕಣ್ಣಿಗೆ ಬಿದ್ದಿತು. ಅದರ ಬಗ್ಗೆ ಪ್ರಶ್ನಿಸಿದ. ರಾಜನು ಬಲ್ಕ ಸುಲ್ತಾನನ ಪತ್ರವನ್ನು ಅವನ ಕೈಗಿತ್ತನು. ಅದನ್ನೋದಿದ ಬೀರಬಲ್ಲನು "ಅದು ಬಹಳ ಸುಲಭದ ಕೆಲಸ" ಎಂದು ಕೊಡವನ್ನು ತೆಗೆದುಕೊಂಡು ಹೋದನು. ಕುಂಬಳಕಾಯಿ ಬೀಜವನ್ನು ನೆಟ್ಟನು. ಸ್ವಲ್ಪ ಸಮಯದ ನಂತರ ಅದು ಗಿಡವಾಗಿ, ಕಾಯಿಬಿಟ್ಟಿತು. ಬೀರಬಲ್ಲನು ಹೀಚಾಗಿದ್ದ ಕಾಯಿಯನ್ನು ಕೊಡದಲ್ಲಿಟ್ಟ. ಕಾಯಿ ದೊಡ್ಡದಾಗಿ ಬೆಳೆಯುತ್ತಾ ಬಂತು. ಕಾಯಿ ಕೊಡವನ್ನು ತುಂಬಿದೊಡನೆ ಗಿಡ ಕತ್ತರಿಸಿ ಬಿಟ್ಟನು. ಅನಂತರ ಕೊಡದ ಬಾಯಿಗೆ ಬಟ್ಟೆ ಸುತ್ತಿ ರಾಜನ ಮುಂದೆ ತಂದಿರಿಸಿದನು.

"ರಾಜರೇ ಇದನ್ನೀಗ ನೀವು ಬಲ್ಕ ಸುಲ್ತಾನನಿಗೆ ಕಳಿಸಬಹುದು. ಆದರೆ ನೀವು ಒಂದು ಪತ್ರದಲ್ಲಿ "ನೀನು ಕೇಳಿದ ಕೊಡದ ತುಂಬಾ ಬುದ್ಧಿವಂತಿಕೆಯನ್ನು ಕಳುಹಿಸುತ್ತಿದ್ದೇನೆ. ಇದನ್ನು ಜೋಪಾನವಾಗಿ ಹೊರತೆಗೆದುಕೋ. ತೆಗೆಯುವಾಗ ಪಾತ್ರೆ ಒಡೆಯಬಾರದು. ಒಳಗಿನ



ಕೊಡದಲ್ಲಿ "ಕುಂಬಳಕಾಯಿ" ಬುದ್ಧಿವಂತಿಕೆ

ವಸ್ತು ಹಾಳಾಗಬಾರದು. ಹಾಗೇನಾದರೂ ಆದರೆ ನೀನು ನಮಗೆ ನಲವತ್ತು ಸಾವಿರ ವರಹವನ್ನು ಕೊಡಬೇಕು-ಅಂತ ಬರೆಯಿರಿ" ಎಂದನು.

ದೂತರು ಪತ್ರವನ್ನೂ, ಪಾತ್ರೆಯನ್ನೂ ಒಯ್ದು ಬಲ್ಕ ಸುಲ್ತಾನನಿಗೆ ಮುಟ್ಟಿಸಿದರು. ಅವನು ಒಳಗಿದ್ದುದನ್ನು ತೆಗೆಯಲಾರದೆ ತನ್ನ ಅಹಂಭಾವಕ್ಕೆ ನಾಚಿ, ಅಕಬರನಲ್ಲಿ ಕ್ಷಮಾಪಣೆ ಕೇಳಿಕೊಂಡನು.

ಅಕಬರನು ಅತ್ಯಂತ ವಿವೇಕಿಯೆನಿಸಿದ್ದವನು. ಇವನು ಬುಲಂದ್ ದರ್ವಾಜಾ ಎಂಬ ಕಡೆ ಬರೆಸಿದ ಮಾತುಗಳು ಹೀಗಿವೆ.

"ಜಗತ್ತು ಒಂದು ಸೇತುವೆ ಇದ್ದಂತೆ. ಇದರ ಮೇಲೆ ನಡೆದು ಹೋಗಿರಿ; ಆದರೆ ಇದರ ಮೇಲೆ ಮನೆ ಕಟ್ಟಬೇಡಿ. ಜಗತ್ತು ಒಂದು ಗಂಟೆ ಕಾಲ ಮಾತ್ರ ಬಾಳುತ್ತದೆ. ಈ ಅಲ್ಪ ಕಾಲವನ್ನು ಪ್ರಾರ್ಥನೆಯಲ್ಲಿ ಕಳೆಯಿರಿ, ಉಳಿದೆಲ್ಲವನ್ನು ನೋಡುವವರಾರು? ನೀವಿತ್ತ ದಾನವೇ

ನಿಮ್ಮ ಸಂಪತ್ತು. ಈ ಜಗತ್ತು ಒಂದು ಕನ್ನಡಿಯೆಂದು ತಿಳಿಯಿರಿ. ಇದರಲ್ಲಿ ಸಿರಿ ಗೋಚರಿಸಿ, ಮಾಯವಾಗುತ್ತದೆ. ನಿಮ್ಮ ಕಣ್ಣಿಗೆ ಕಾಣದಿದ್ದುದನ್ನು ನಿಮ್ಮದೆಂದು ಭಾವಿಸಬೇಡಿ."

ಇಂತಹಾ ಅಕಬರನಿಗೆ ಪಂಡಿತರ ಜೊತೆಗೆ ಚರ್ಚಿಸುವುದು ಒಂದು ಹವ್ಯಾಸವೇ ಆಗಿತ್ತು. ಅಕಬರ ಹಾಗೂ ಬೀರ್‌ಬಲ್ಲರ ನಡುವಿನ ಪ್ರಶ್ನೋತ್ತರದ ಒಂದೆರಡು ಸಂದರ್ಭಗಳನ್ನು ಹೇಳುವ ಕತೆ ಹೀಗಿವೆ.

ಪ್ರಶ್ನೋತ್ತರ

☛ ಅತ್ಯುತ್ತಮವಾದ ಆಯುಧ ಯಾವುದು?

➡ ಬುದ್ಧಿವಂತಿಕೆ.

☛ ದೊಡ್ಡ ಮೂರ್ಖ ಯಾರು?

➡ ಯಾರು ತನ್ನ ಸೌಖ್ಯ ಎಲ್ಲಿದೆ ಎಂದು ತಿಳಿದಿಲ್ಲವೊ ಅವನೇ ದೊಡ್ಡ ಮೂರ್ಖ.

☛ ಗೆಲ್ಲಲಾಗದ ಶತ್ರು ಯಾರು?

➡ ಸಾವು.

☛ ನಾಶವಾಗದೇ ಇರುವುದು ಯಾವುದು?

➡ ಒಬ್ಬನು ಗಳಿಸುವ ಕೀರ್ತಿ.

☛ ಮೂರ್ಖನನ್ನು ಹೇಗೆ ಗುರುತಿಸುತ್ತಿ?

➡ ಅವನ ಮಾತಿನಿಂದ.

☛ ಸುಖದ ಹಾದಿ ಯಾವುದು?

➡ ತೃಪ್ತನಾಗಿರುವುದು.

☛ ಸತ್ಯಕ್ಕೂ ಅಸತ್ಯಕ್ಕೂ ಇರುವ ಅಂತರವೆಷ್ಟು?

➡ ಕಣ್ಣು ಹಾಗೂ ಕಿವಿಗೂ ಇರುವ ಅಂತರದಷ್ಟು.

☛ ಹೇಗೆ?

➡ ಕಣ್ಣುಗಳಿಂದ ನೋಡಿದ ವಿಷಯವು ಸತ್ಯವಾದದ್ದು. ಕಿವಿಗಳಿಂದ ಕೇಳಿದ ವಿಷಯ ಅಸತ್ಯವಾದದ್ದು.

ಬೀರ್‌ಬಲ್ ಚತುರನಷ್ಟೇ ಅಲ್ಲ ಜನರ ಪ್ರೀತಿಗಳಿಸಿದವನೂ ಆಗಿದ್ದನು. ಪ್ರಜೆಗಳ ಸುಖಕ್ಕಾಗಿ ಹಗಲಿರುಳು ಚಿಂತಿಸುತ್ತಿದ್ದವನು. ಅನೇಕ ಅನಾಥರಿಗೆ ಬದುಕು ಸಾಗಿಸಲು ಧನ ಸಹಾಯವನ್ನು ಒದಗಿಸಿಕೊಟ್ಟವನು. ರಾಜ ಹಾಗೂ ಜನತೆಯ ನಡುವೆ ಸೇತುವೆಯಂತೆ ಕೆಲಸ ಮಾಡುತ್ತಿದ್ದನು. ರಾಜನ ಸುತ್ತ ಮುತ್ತ ನಡೆಯುತ್ತಿದ್ದ ಅನ್ಯಾಯಗಳನ್ನು ರಾಜನೇ ಅದನ್ನು ಪ್ರತ್ಯಕ್ಷ ತಿಳಿಯುವಂತೆ ಮಾಡುವುದು ಬೀರಬಲ್ಲನ ತಂತ್ರ. ಇದಕ್ಕಾಗಿ ಜಾಣತನದಿಂದ ಸನ್ನಿವೇಶಗಳನ್ನು ಹೊಂದಿಸುತ್ತಿದ್ದ. ಇದನ್ನು ಹೇಳುವ ಭಕ್ಷೀಸು ಎಂಬ ಕಥೆ ಹೀಗಿದೆ.

ಭಕ್ಷೀಸು

ಅಕಬರ ರಾಜನು ಜನಾನುರಾಗಿಯೆಂದೂ, ಪಂಡಿತರ, ಕವಿಗಳ ಗೆಳೆಯನೆಂದೂ, ಕಲಾವಿದರ ಪೋಷಕನೆಂದೂ ರಾಜನ ಅನುಗ್ರಹಕ್ಕಾಗಿ ಆಸೆಪಟ್ಟು, ಅನೇಕ ಜನ ಅರಮನೆಗೆ ಬರತೊಡಗಿದರು. ಆದರೆ ರಾಜನನ್ನು ಕಾಣುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಅರಮನೆಯ ದ್ವಾರಪಾಲಕ. ರಾಜನನ್ನು ಕಾಣಲು ಬಂದವರು ಈ ದ್ವಾರಪಾಲಕನಿಗೆ ಲಂಚ ಕೊಡಬೇಕಾಗುತ್ತಿತ್ತು. ಕೊಡಲು ಆಗದವರು ನಿರಾಶರಾಗಿ ಹಿಂತಿರುಗಬೇಕಾಗಿತ್ತು. ಇದು ಹೇಗೋ ಬೀರ್‌ಬಲ್ಲನಿಗೆ ತಿಳಿಯಿತು. ಬೀರ್‌ಬಲ್ಲನು ಸತ್ಯವನ್ನು ತಿಳಿಯಲು ಬಯಸಿದ.

ಒಂದು ದಿನ ಬೀರ್‌ಬಲ್ಲನು ಮಾರುವೇಶದಲ್ಲಿ ತಾನೊಬ್ಬ ಕವಿ ಎಂದು ಹೇಳಿಕೊಂಡು ಅರಮನೆಗೆ ಬಂದ. ದ್ವಾರಪಾಲಕ ಅವನನ್ನು ನಿಲ್ಲಿಸಿ, "ರಾಜರು ಬಹಳ ಕೆಲಸದಲ್ಲಿದ್ದಾರೆ. ಮಹಾರಾಜರೆಂದರೇನು? ನೀನೆಂದರೇನು? ಯಾರನ್ನೂ ಒಳಬಿಡಬಾರದೆಂದು ನನಗೆ ಹೇಳಿದ್ದಾರೆ" ಎಂದ. ಬೀರ್‌ಬಲ್ ಒಳಕ್ಕೆ ಬಿಡುವಂತೆ ಅಂಗಲಾಚಿದ. ಆಗ ದ್ವಾರಪಾಲಕ, ಬೀರ್‌ಬಲ್ಲನಿಗೆ "ನಿನ್ನನ್ನು ಸುಮ್ಮನೆ ಬಿಡಲಾಗುವುದಿಲ್ಲ. ಮಹಾರಾಜರು ನಿನಗೆ ಏನು ಕೊಡುತ್ತಾರೆಯೋ ಅದರಲ್ಲಿ ಸಮಪಾಲು ನನಗೂ ಕೊಡುತ್ತೇನೆಂದು ಪ್ರಮಾಣ ಮಾಡಿಹೋಗು" ಎಂದ.

ಅದರಂತೆ ಬೀರ್‌ಬಲ್ಲನು ಪ್ರಮಾಣಮಾಡಿ ಒಳಗೆ ಹೋದ. ರಾಜನ ಅನುಮತಿ ಕೋರಿ ಕವಿತೆಗಳನ್ನು ಓದಿದ. ಕವನಗಳನ್ನು ಆಲಿಸಿ ಆನಂದ ಪಟ್ಟ ಅಕಬರನು, "ನಿನಗೇನು ಬೇಕೋ ಕೇಳಿಕೋ" ಎಂದ.

ಬೀರಬಲ್ಲನು "ನನಗೇನೂ ಬೇಡ. ನೀವು ಕೊಡುವುದೇ ನಿಜವಾದರೆ ನನಗೆ ನೂರು ಚಾವಟಿ ಏಟುಗಳು ಬೇಕು" ಎಂದ. ಅಕಬರನಿಗೆ ಆಶ್ಚರ್ಯವಾಯಿತು. "ನಿನಗೇನು ಬುದ್ಧಿ ಕೆಟ್ಟಿದೆಯೇ"? ಎಂದ. ಆಗ ಬೀರಬಲ್ಲನು "ರಾಜನ ಒಳಿತಿಗಾಗಿ ಇದನ್ನು ಬಹುಮಾನವಾಗಿ ಕೇಳುತ್ತಿದ್ದೇನೆ" ಎಂದನು. ನನ್ನ ಯೋಗಕ್ಷೇಮಕ್ಕಾಗಿ ನೀನು ಏಟುತಿನ್ನುವುದೇ ಎಂದು ಕೇಳಿದ. 'ನಾನೊಬ್ಬನೇ ಅಲ್ಲ, ನಾವಿಬ್ಬರೂ!' ಎಂದು ಬೀರ್‌ಬಲ್ ನುಡಿದ.

"ನಿನ್ನ ಮಾತುಗಳೇ ನನಗೆ ಅರ್ಥವಾಗಲಿಲ್ಲ. ಬಿಡಿಸಿ ಹೇಳು" ಎಂದು ರಾಜನೆಂದ.

ಬೀರಬಲ್ಲನು "ಅರಮನೆಯ ದ್ವಾರಪಾಲಕ ತಾವು ನನಗೇನು ಕೊಡುತ್ತೀರೋ ಅದರಲ್ಲಿ ಸಮಪಾಲನ್ನು ಬಯಸಿದ್ದಾನೆ. ತಮ್ಮನ್ನು ನೋಡಲೆಂದು ಅವನು ನನ್ನನ್ನು ಒಳಗೆ ಬಿಟ್ಟಿದ್ದಕ್ಕಾಗಿ ಇದನ್ನು ಕೊಡಬೇಕಂತೆ ಎಂದ. ರಾಜನು ಸಿಟ್ಟಾಗಿ ದುರಾಸೆಯ ದ್ವಾರಪಾಲಕನಿಗೆ ಶಿಕ್ಷೆ ವಿಧಿಸಿದನು. ನಂತರ ಮಾರುವೇಶದಲ್ಲಿ ಬಂದವ ಬೀರ್‌ಬಲ್ಲನೇ ಎಂಬುದು ತಿಳಿಯಿತು. ರಾಜ ಅವನ ಚತುರ ಉಪಾಯಕ್ಕೆ ಮನಸಾರೆ ನಕ್ಕನು.

ಬೀರಬಲ್ಲನು ನಡೆಸಿದ ನ್ಯಾಯ ತೀರ್ಮಾನಗಳದೇ ವಿಶಿಷ್ಟ ಕಥೆಗಳೆನಿಸಿವೆ. ಮನುಷ್ಯ ಸ್ವಭಾವವನ್ನು ಚೆನ್ನಾಗಿ ಅರಿತ ಜಾಣ ಬೀರ್‌ಬಲ್ ಎಂಬುದು ಇಂತಹಾ ಕಥೆಗಳಲ್ಲಿ ಕಾಣಬರುತ್ತದೆ. ಇದಕ್ಕೆ ಪ್ರಸಿದ್ಧ ಉದಾಹರಣೆ ಹತ್ತಿ ವ್ಯಾಪಾರಿಯ ಕಥೆ.

ಹತ್ತಿ ವ್ಯಾಪಾರಿಯ ಕಥೆ

ರಾಜಧಾನಿಯಲ್ಲಿ ಹತ್ತಿಯ ವ್ಯಾಪಾರಿಯೊಬ್ಬನಿದ್ದ. ಅವನಿಗೆ ನಾಲ್ಕಾರು ಹತ್ತಿಯನ್ನು ಸಂಗ್ರಹಿಸುವ ಮನೆಗಳಿದ್ದವು. ಅದರಿಂದ ಪ್ರತಿ ದಿನವೂ ಹತ್ತಿ ಕಳುವಾಗುತ್ತಿತ್ತು. ವ್ಯಾಪಾರಿಯ ಬಳಿ ಹತ್ತಾರು ಸೇವಕರಿದ್ದರು. ಇವರಲ್ಲಿ ಯಾರು ಕಳ್ಳರೆಂಬುದನ್ನು ಪತ್ತೆ ಹಚ್ಚಲಾಗದೆ, ವ್ಯಾಪಾರಿ ಬೀರ್‌ಬಲ್ ಬಳಿಹೋಗಿ ತನ್ನ ಕಷ್ಟ ತೋಡಿಕೊಂಡ.

ಬೀರಬಲ್ಲನು ಸ್ವಲ್ಪ ಹೊತ್ತು ಯೋಚಿಸಿ, "ನಾಳೆ ಬೆಳಿಗ್ಗೆ ನಿನ್ನ ಸೇವಕರನ್ನೆಲ್ಲಾ ನನ್ನ ಮನೆಯಲ್ಲಿ ನಡೆಯುವ ಸತ್ಕಾರ ಸಮಾರಂಭಕ್ಕೆ ಕಳುಹಿಸು" ಎಂದ. ವರ್ತಕ ಆಗಲಿ ಎಂದೊಪ್ಪಿದ. ಸಮಾರಂಭದ ಸುದ್ದಿ ಕೇಳಿ ಸೇವಕರು ಸಂತೋಷಗೊಂಡರು.

ಮರುದಿನ ಬೆಳಿಗ್ಗೆ ಸೇವಕರೆಲ್ಲಾ ಬೀರಬಲ್ಲನ ಮನೆಗೆ ಹೋದರು "ಬನ್ನಿ, ಬನ್ನಿ ಎಂದು ಬೀರಬಲ್ಲ ಸ್ವಾಗತಿಸಿದ. "ನಿಮ್ಮಲ್ಲಿ ಹತ್ತಿಕಳ್ಳರು ಯಾರು?" ಎಂದು ಕೇಳಿದ.



ಬೀರ್‌ಬಲ್ ಹತ್ತಿಕಳ್ಳನನ್ನು ಹಿಡಿದದ್ದು

"ನಾವ್ಯಾರೂ ಅಲ್ಲ" ಎಂದು ಸೇವಕರು ಒಕ್ಕೊರಲಿನಲ್ಲಿ ಹೇಳಿದರು. ಬೀರ್‌ಬಲ್ ನಕ್ಕು "ಅಯ್ಯಾ! ಹತ್ತಿಕಳ್ಳರಿರಾ! ಇಲ್ಲಿಗೆ ಬರೋಕೆ ಮುಂಚೆ ನಿಮ್ಮ ಮೀಸೆ, ಗಡ್ಡಕ್ಕೆ ಅಂಟಿಕೊಂಡಿರೋ ಹತ್ತೀನ ತೆಗೆದುಹಾಕಿ ಬರಬಾರದಾಗಿತ್ತಾ?" ಎಂದು ಕೇಳಿದ.

ತಕ್ಷಣ ಇಬ್ಬರು ಸೇವಕರು ಗಾಬರಿಯಿಂದ ತಮ್ಮ ಮೀಸೆ-ಗಡ್ಡಗಳನ್ನು ಮುಟ್ಟಿ ನೋಡಿಕೊಂಡರು. ಬೀರ್‌ಬಲ್ ಅವರನ್ನು ಹಿಡಿದು, "ನೀವೇ ಕಳ್ಳರು. ಒಳ್ಳೆಯ ಮಾತಿನಲ್ಲಿ ನಿಮ್ಮ ಯಜಮಾನನಿಗೆ ನೀವು ಕದ್ದ ಹತ್ತಿಯನ್ನೆಲ್ಲಾ ವಾಪಸ್ಸು ಮಾಡಿ" ಎಂದ. ಕಳ್ಳರು ನಡುಗುತ್ತಾ "ಅಪ್ಪಣೆ ಮಹಾಸ್ವಾಮಿ" ಎಂದರು.

ಹತ್ತಿ ವ್ಯಾಪಾರಿ ಬೀರಬಲ್ಲನ ಬುದ್ಧಿಶಕ್ತಿಗೆ ಸಂತಸಪಟ್ಟ. ಇದೇ ರೀತಿಯ ಮತ್ತೊಂದು ಕಥೆ "ಕಳ್ಳರ ಶೋಧ ಎಂಬುದು". ಇದರಲ್ಲಿ ಬಡ್ಡಿ ವ್ಯಾಪಾರಿಯೊಬ್ಬನ ಹಣ ಕಳುವಾದಾಗ ಬೀರ್‌ಬಲ್ ಕಳ್ಳನನ್ನು ಹೇಗೆ ಪತ್ತೆ ಹಚ್ಚಿದನೆಂಬ ವಿವರವಿದೆ.

ಕಳ್ಳರ ಶೋಧ

ಸಾಹುಕಾರನೊಬ್ಬನು ಅಕಬರ ರಾಜನಿಗೆ ತನ್ನ ಹಣ ಕಳುವಾದುದರ ಬಗ್ಗೆ ದೂರಿತ್ತನು. ಆಗ ಬೀರ್‌ಬಲ್ಲನು ಸಾಹುಕಾರನಿಂದ ಆ ದಿನ ಮನೆಗೆ ಹತ್ತು ಮಂದಿ ನೌಕರರ ಹೊರತಾಗಿ ಯಾರೂ ಬಂದಿಲ್ಲವೆಂಬುದನ್ನು ಅರಿತನು. ನಂತರ ನೌಕರರನ್ನು ಕರೆಸಿ ಒಂದೇ ಉದ್ದ ದಪ್ಪವಿರುವ ಕೋಲುಗಳನ್ನು ತರಿಸಿದನು. ಅವರ ಎದುರಿಗೆ ಆ ಕೋಲುಗಳಿಗೆ ಕುಂಕುಮವಿಟ್ಟು, ದೂಪಹಾಕಿ ಮಂತ್ರಿಸುವ ನಟನೆ ಮಾಡಿದನು. ನಂತರ ಅವರೆಲ್ಲರಿಗೂ ಒಂದೊಂದು ಕೋಲನ್ನು ಕೊಟ್ಟು "ನಿಮ್ಮ ನಿಮ್ಮ ಮನೆಗೆ ಹೋಗಿರಿ. ನಾಳೆ ಮುಂಜಾನೆ ಕೋಲಿನೊಂದಿಗೆ ಇಲ್ಲಿಗೆ ಬಂದು ಬಿಡಿರಿ. ಹಣವನ್ನು ಕದ್ದವನ ಕೋಲು ಮಾತ್ರ ಅಳತೆಯಲ್ಲಿ ಒಂದು ಇಂಚು ಬೆಳೆಯುವುದು, ಉಳಿದವರ ಕೋಲು ಹಾಗೇ ಇರುವುದು" ಎಂದು ಹೇಳಿ ಅವರೇನ್ನೆಲ್ಲಾ ಬೀಳ್ಕೊಟ್ಟನು.

ಮರುದಿನ ಎಲ್ಲರೂ ತಮ್ಮ ತಮ್ಮ ಕೋಲುಗಳೊಂದಿಗೆ ಆಸ್ಥಾನಕ್ಕೆ ಬಂದರು. ಎಲ್ಲರ ಕೋಲುಗಳನ್ನು ತೆಗೆದುಕೊಂಡು ಬೀರ್‌ಬಲ್ಲನು ಪರೀಕ್ಷಿಸಿದನು. ಅವುಗಳಲ್ಲಿ ಒಂದು ಕೋಲು ಮಾತ್ರ ಒಂದು ಇಂಚು ಕಡಿಮೆಯಾಗಿತ್ತು. ಆ ಕೋಲಿನ ಒಡೆಯನೇ ಕಳ್ಳನೆಂದು ಬೀರ್‌ಬಲ್ಲನು ಪತ್ತೆಹಚ್ಚಿದನು. "ಇವನನ್ನು ಸೆರೆಮನೆಗೆ ಹಾಕಿರಿ" ಎಂದು ಸೇವಕರಿಗೆ ಹೇಳಿದ. ಸೇವಕರು ಅವನಿಗೆ ಸಂಕೋಲೆ ತೊಡಿಸಿ ಎಳೆದೊಯ್ಯತೊಡಗಿದರು. ಆಗ ಆತನು ತನ್ನ ತಪ್ಪನ್ನು ಒಪ್ಪಿಕೊಂಡು, ಸಾಹುಕಾರನ ಎಲ್ಲ ಹಣವನ್ನು ತಂದುಕೊಟ್ಟನು. ಕಳ್ಳನು ತನ್ನ ಅಪರಾಧ ತಿಳಿಯಬಾರದೆಂದು ಕೋಲನ್ನು ಒಂದು ಇಂಚು ಕತ್ತರಿಸಿ ತಂದಿದ್ದನೆಂದು ಬೇರೆ ಹೇಳಬೇಕಾಗಿಲ್ಲವಲ್ಲ.

ಹೀಗೆ ಬೀರಬಲ್ಲನು ನಡೆಸಿದ ನ್ಯಾಯ ತೀರ್ಮಾನಗಳ ಕಥೆಗಳೇ ಹಲವಾರಿವೆ. ವಿಶಿಷ್ಟ ವೈಖರಿಯಿಂದ ಕೊಡಿದ ನ್ಯಾಯತೀರ್ಮಾನ ಬೀರ್‌ಬಲ್ಲನದು. ಮನುಷ್ಯನ ಸ್ವಭಾವವನ್ನು ಚೆನ್ನಾಗಿ ಅರಿತಿದ್ದ ಬೀರ್‌ಬಲ್ಲನು ಯುಕ್ತಿಗೆ ಪ್ರತಿಯುಕ್ತಿ, ಮೋಸಕ್ಕೆ ಪ್ರತಿ ಮೋಸದ ಉಪಾಯವನ್ನು ಹೂಡುತ್ತಾ ಕಳ್ಳರನ್ನು ಪತ್ತೆ ಹಚ್ಚುತ್ತಿದ್ದನು. ಜೊತೆಗೆ ಅಪರಾಧಿ ತಾನಾಗಿಯೇ ಬೀರಬಲ್ಲನ ಉಪಾಯದ ಬಲೆಯಲ್ಲಿ ಸಿಕ್ಕಿಬೀಳುವಂತೆ ಮಾಡುತ್ತಿದ್ದನು. ಬೀರಬಲ್ಲನು ಕಳ್ಳರನ್ನು ಪತ್ತೆಹಚ್ಚಲು, ಮೋಸಗಾರರನ್ನು ಬಗ್ಗು ಬಡಿಯಲು ಮಾಡಿದ ತಂತ್ರಗಳು ನಗೆಯುಕ್ಕಿಸುತ್ತದೆ.

ಎಷ್ಟೋ ವೇಳೆ ರಾಜನ ಕೋಪಕ್ಕೆ ಸಿಕ್ಕಿ ಕಠಿಣ ಶಿಕ್ಷೆ ಪಡಬೇಕಾಗಿ ಬಂದಂತಹ ಜನರನ್ನು ಬೀರ್‌ಬಲ್ ತನ್ನ ಉಪಾಯದಿಂದ ರಕ್ಷಿಸಿದ್ದನು. ಅನ್ಯಾಯಕ್ಕೊಳಗಾದ ಜನರಿಗೆ

ಸರಿಯಾದ ನ್ಯಾಯ ದೊರೆಯುವಂತೆ ಮಾಡಿದ್ದನು. ಎಷ್ಟೋ ವೇಳೆ ರಾಜರಾಣಿಯರ ನಡುವಿನ ವಿರಸವನ್ನೂ ತನ್ನ ಉಪಾಯದಿಂದ ಸರಸವಾಗಿಸಿ ಸಂಬಂಧ ಬೆಸೆದವನು ಬೀರಬಲ್ಲ. ಅಂತಹಾ ಒಂದು ವಿರಸ ಸರಸವಾದ ಕಥೆ ಹೀಗಿದೆ.

ಪ್ರಿಯವಸ್ತು

ಒಮ್ಮೆ ಪಟ್ಟದರಾಣಿ ಬೇಗಂ ಅವರಿಗೂ ಅಕಬರನಿಗೂ ವಾದ ವಿವಾದ ನಡೆಯಿತು. ಸಿಟ್ಟಾದ ರಾಜನು "ನನ್ನ ಮನೆಯಲ್ಲಿರಬೇಡ, ನಿನಗೆ ಇಷ್ಟವಾದ ವಸ್ತುಗಳನ್ನು ತೆಗೆದುಕೊಂಡು ತವರು ಮನೆಗೆ ಹೋಗು" ಎಂದು ಹೇಳಿ ಹೊರಟುಹೋದನು.

ರಾಜನು ಹಠವಾದಿ. ಅವನು ಹೇಳಿದಂತೆ ತವರು ಮನೆಗೆ ಹೋದರೆ ಕಡೆತನಕ ಮುಖದರ್ಶನ ಕೊಡದೇ ಹೋಗಬಲ್ಲ ಎಂಬ ಚಿಂತೆ. ಏನೂ ತೋಚದೆ ಬೇಗಂ ಬೀರಬಲ್ಲನನ್ನು ಕರೆಸಿಕೊಂಡು ಸಲಹೆ ಹೇಳಿದಳು.

ಬೀರಬಲ್ಲನು ಗುಟ್ಟಾಗಿ ಒಂದು ಉಪಾಯವನ್ನು ಹೇಳಿದ.

ಅವನ ಸಲಹೆಯಂತೆ ಕಡೆಯ ಬಾರಿ ರಾಜನನ್ನು ಕಾಣಬೇಕೆಂದು ಬಂದು ಕಣ್ಣೀರು ಸುರಿಸುತ್ತಾ ತನ್ನನ್ನು ಕ್ಷಮಿಸಲು ಕೇಳಿದಳು. ರಾಜನ ಹಠವು ಇನ್ನಷ್ಟು ಹೆಚ್ಚಾಯಿತು. ಆಗ ಕಣ್ಣೀರು ಸುರಿಸುತ್ತ, ಒಂದು ಬಟ್ಟಲಲ್ಲಿ ಪಾನೀಯವನ್ನು ತುಂಬಿ ಅವನೆದುರಿಗಿಟ್ಟು 'ನನ್ನ ಕೈಯಿಂದ ಕೊನೆಯಬಾರಿ ಪಾನೀಯವನ್ನಾದರೂ ಸೇವಿಸಿರಿ' ಎಂದು ಪ್ರಾರ್ಥಿಸಿದಳು. ರಾಜನು ಪಾನೀಯವನ್ನು ಸ್ವೀಕರಿಸಿದನು. ಆದರಲ್ಲಿ ಮುಂಚೆಯೇ ಬೀರ್‌ಬಲ್ಲನ ಸಲಹೆಯಂತೆ ಮದ್ದನ್ನು ಬೆರೆಸಲಾಗಿತ್ತು. ರಾಜನಿಗೆ ಪ್ರಜ್ಞೆ ತಪ್ಪಿತು. ನಂತರ ರಾಜನನ್ನು ಮೇನೆಯಲ್ಲಿ ಹಾಕಿಕೊಂಡು ಬೇಗಂ ತನ್ನ ತವರು ಮನೆಗೆ ಹೋಗಿ ಸೇರಿದಳು. ರಾಜನು ಎಚ್ಚರಗೊಂಡು "ನನ್ನನ್ನು ಇಲ್ಲಿಗೇಕೆ ಕರೆತಂದಿರುವೆ" ಎಂದು ಕೇಳಿದನು. ಬೇಗಂಳು ಬೀರ್‌ಬಲ್ ಹೇಳಿಕೊಟ್ಟಂತೆ "ನೀವೇ ಹೇಳಿದ ಹಾಗೆ ನನಗೆ ಪ್ರಿಯವಾದ ವಸ್ತುವನ್ನು ಕರೆತಂದಿದ್ದೇನೆ. ನಿಮಗಿಂತ ಪ್ರಿಯರಾದವರು ನನಗಿನ್ನಾರು?" ಎಂದು ಕೇಳಿದಳು. ಹೀಗೆ ಬೀರಬಲ್ಲನ ತಂತ್ರ ಸತಿಪತಿಯರನ್ನು ಒಂದುಗೂಡಿಸಿತು.

ಅಕಬರ ರಾಜನ ಎಷ್ಟೋ ಕೆಣಕುವ ಪ್ರಶ್ನೆಗಳಿಗೆ ತಕ್ಷಣವೇ ಸಮರ್ಪಕವಾದ ಉತ್ತರ ಕೊಟ್ಟು, ರಾಜನನ್ನು ಸಮಾಧಾನ ಪಡಿಸುತ್ತಿದ್ದವನು ಬೀರಬಲ್. ಅವನ ಶಾಸ್ತ್ರ ಜ್ಞಾನವನ್ನು ಹೇಳುವಂತಹಾ ಎಷ್ಟೋ ಸ್ವಾರಸ್ಯವಾದ ಕಥೆಗಳಿವೆ.

ಯಾವ ಕಾಲ ಶ್ರೇಷ್ಠವೆಂಬ ಪ್ರಶ್ನೆಗೆ ಬೀರಬಲ್‌ನ ಉತ್ತರ, ಲೋಕದ ಜೀವನಕ್ಕೆ ಹತ್ತಿರವಾದದ್ದು. "ರಾಜನೇ, ಹಸಿದವನಿಗೆ ಯಾವ ಕಾಲದಲ್ಲೂ ಸುಖ ದೊರೆಯಲಾಗದು. ಹೊಟ್ಟೆ ತುಂಬಿದವನಿಗೆ, ಎಲ್ಲ ಕಾಲಗಳೂ ಹಿತಕರವಾಗುವವು."

ಒಮ್ಮೆ ಅಕಬರನಿಗೆ ಜೀವನದಲ್ಲಿ ವೈರಾಗ್ಯಭಾವನೆ ಉಂಟಾಯಿತು. ಆಗ ಬೀರ್‌ಬಲ್ಲನು ಮಾನವನ ವೈರಾಗ್ಯವನ್ನು ಕುರಿತು ರಾಜನಿಗೆ ಹೇಳಿದ ವಿವರಣೆಗಳು ಎಲ್ಲರಲ್ಲೂ ಕಾಣುವಂತದ್ದಾಗಿದೆ.

ಮಾನವ ವೈರಾಗ್ಯ ಕಥೆ

ಮಾನವ ಜೀವನದಲ್ಲಿ ಬರುವ ವೈರಾಗ್ಯ ಮುಖ್ಯವಾಗಿ ಮೂರು ರೀತಿಯದು.

೧) ಸ್ಮಶಾನ ವೈರಾಗ್ಯ ೨) ಪ್ರಸವ ವೈರಾಗ್ಯ ೩) ಪುರಾಣ ವೈರಾಗ್ಯ

ಹೆಣ್ಣುಮಕ್ಕಳು ಹಡೆಯುವ ಸಮಯದಲ್ಲಿ ವೇದನೆ ತಾಳಲಾರದೆ ಅಯ್ಯೋ, ಅಮ್ಮ! ಇನ್ನು ಮೇಲೆ ನಾನು ಹಡೆಯುವುದೇ ಇಲ್ಲವೆನ್ನುತ್ತಾರೆ. ಆದರೆ, ಪುನಃ ಪತಿಯ ಸ್ನೇಹ ಬಯಸುತ್ತಾರೆ. ಹಡೆಯಲು ಸಿದ್ಧರಾಗುತ್ತಾರೆ. ಇದು ಪ್ರಸವ ವೈರಾಗ್ಯವಾದರೆ, ಇನ್ನೊಂದು ಸ್ಮಶಾನ ವೈರಾಗ್ಯ. ಯಾರ ಮನೆಯಲ್ಲಾದರೂ ಯಾರಾದರೂ ಸತ್ತರೆ, ಏನಿದೆ ಈ ದೇಹದಲ್ಲಿ? ನೀರ ಮೇಲೆ ಗುಳ್ಳೆಯಂತೆ ಜೀವನ, ಈಶನ ಮೇಲೆ ಭಕ್ತಿಯಿದ್ದಾಗ ಜೀವನ ಸಾರ್ಥಕವೆನಿಸುವುದು ಎನ್ನುತ್ತಾರೆ. ಸ್ಮಶಾನ ಬಿಟ್ಟು ಬರುವವರೆಗೂ ಇದೇ ಮಾತು ಇರುತ್ತದೆ. ನಂತರದಲ್ಲಿ ತನ್ನ ಬಾಳು, ತನ್ನ ಸಿರಿ, ತನ್ನ ಹೆಂಡತಿ ಮಕ್ಕಳು ಎಂದು ಮನಸ್ಸು ಹಿಂದಿನದನ್ನು ಮರೆಯುತ್ತದೆ.

ಮತ್ತೊಂದು ಪುರಾಣವೈರಾಗ್ಯ. ಪುರಾಣ ಕೇಳುತ್ತ ಕುಳಿತಿರುವಾಗ ನಾವೂ ಪುರಾಣ ಪುರುಷರಂತೆ ಕೀರ್ತಿವಂತರಾಗಬೇಕು ಎಂಬ ಆಕಾಂಕ್ಷೆ ಬರುತ್ತದೆ. ಆದರೆ ಮನೆಗೆ ಬಂದ ಕೂಡಲೇ ಹಿಂದಿನದನ್ನು ಮರೆತು ಸಂಸಾರ ಸಾಗರದಲ್ಲಿ ಮುಳುಗುತ್ತಾರೆ.

"ಆದ್ದರಿಂದ ಪ್ರಭು, ನೀವು ಕೂಡಾ ಇನ್ನು ಮೇಲೆ ಇಂತಹಾ ವೈರಾಗ್ಯಕ್ಕೇ ಬನ್ನಿರಿ. ದೀರ್ಘವೈರಾಗ್ಯಕ್ಕೆ ಹೋಗಬೇಡಿರಿ. ಬಂದದ್ದನ್ನು ಧೈರ್ಯದಿಂದ ಎದುರಿಸಬೇಕು. ಶಕ್ತಿ ಇರುವವರೆಗೆ ಹೋರಾಡಬೇಕು. ಅನ್ಯಾಯಕ್ಕೆ ಬಲಿಯಾಗದೆ ಸತ್ಯ ಶಾಂತಿಗಾಗಿ ಬಾಳಬೇಕು. ಪ್ರಜಾ ಕಲ್ಯಾಣವೇ ರಾಜನ ಮುಖ್ಯ ಕರ್ತವ್ಯ" ಎಂದು ಹೇಳಿದನು. ಅಕಬರನಿಗೆ ಬೀರಬಲ್ಲನ ಮಾತುಗಳಿಂದ ಬೇಸರ ದೂರವಾಗಿ ಹೊಸ ಚೈತನ್ಯ ಉಕ್ಕಿತು.

ಹೀಗೆ ಅಕಬರರಾಜನ ಪ್ರಿಯಮಂತ್ರಿ, ವಿದೂಷಕ, ವಿದ್ವಾಂಸ ಎನಿಸಿದವನು ಬೀರ್‌ಬಲ್. ಅಕಬರನು ಕಾಶ್ಮೀರದ ಸಿಂಧೂ ಹಾಗೂ ಕಾಂಧಾರ ದೇಶವನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದನು. ಈ ಯುದ್ಧದ ಪ್ರಮುಖ ನಾಯಕತ್ವವನ್ನು ಅಕಬರನು ತನ್ನ ನೆಚ್ಚಿನ ವ್ಯಕ್ತಿಗಳಾಗಿದ್ದ ಬೀರ್‌ಬಲ್, ತೋದರ್ ಮಲ್ ಹಾಗೂ ಭಗವಾನ್ ದಾಸರಿಗೆ ಒಪ್ಪಿಸಿದನು. ಸೈನ್ಯದ ನಾಯಕತ್ವದ ಅನುಭವವಿಲ್ಲದ ಬೀರ್‌ಬಲ್ ಈ ಸಂದರ್ಭದಲ್ಲಿ ನಡೆದ ಆಕ್ರಮಣದಲ್ಲಿ ಪ್ರಾಣಬಿಟ್ಟನೆಂದು ಚರಿತ್ರೆ ಹೇಳುತ್ತದೆ.

ಆದರೆ ಬೀರ್‌ಬಲ್‌ನ ಬಗೆಗಿರುವ ಅನೇಕ ಕಥೆಗಳು ಅವನ ಬಹುಮುಖ ಪ್ರತಿಭೆಯನ್ನು ಹೇಳುವಂತದ್ದಾಗಿದೆ. ಈ ಕಥೆಗಳಲ್ಲಿ ಕಾಳೆಷ್ಟೋ ಜೊಳ್ಳೆಷ್ಟೋ ಗೊತ್ತಿಲ್ಲ. ಎಷ್ಟೋ ಕಥೆಗಳನ್ನು ಅವನ ಹೆಸರಿನಲ್ಲಿ ಸೇರಿಸಿರಬಹುದು.

ಒಟ್ಟಾರೆ, ಇವುಗಳಲ್ಲಿ ಬೀರಬಲ್ಲನ ಜಾಣತನ, ಸಮಯಸ್ಫೂರ್ತಿ, ನಿರ್ಭೀತಿ, ಲೋಕಾನುಭವನ್ನು ಗುರುತಿಸಬಹುದು. ಧೈರ್ಯ ಮತ್ತು ಉಪಾಯಗಳಿಂದಲೇ ಅಪಾಯಗಳನ್ನೆದುರಿಸಿದವನು ಬೀರಬಲ್. ತನ್ನ ಮಾತಿನ ಚತುರತೆ, ವಿನೋದಗುಣದಿಂದ ರಾಜನನ್ನೂ, ಆ ಮೂಲಕ ಸಮಾಜವನ್ನೂ ತಿದ್ದುವ ಕೆಲಸ ನಡೆಸಿದನು. ಇವನ ವಿಚಾರವಾಗಿ ಇರುವ ಕಥೆಗಳು ನಡೆದಿರಲಿ, ನಡೆಯದೆ ಇರಲಿ ಅವು ಓದುವವರಿಗೆ ಆನಂದವನ್ನು ಮತ್ತು ಲೋಕನೀತಿಯನ್ನು ತಿಳಿಸುತ್ತವೆ.

❖ ❖ ❖ ❖

ಕನ್ನಡ ವಿಶ್ವ … ರ ಪದವಿ ಮಟ್ಟದವರೆಗೆ ಉತ್ತಮ
ಹಾಗೂ ಉ … ುವಾಗಿ 'ಪಠ್ಯಪುಸ್ತಕ ರಚನಾ
ವಿಭಾಗ'ವ … ಗಾಗಿ ಪಠ್ಯಪುಸ್ತಕ ರಚನೆ
ಮಾಡಬೇಕ … ಲಾಖೆ. ನವಸಾಕ್ಷರರಿಗಾಗಿ
ಪುಸ್ತಕ ಬ … ಲಯಕ್ಕೆ ವಹಿಸಿಕೊಟ್ಟರು.
ವಿಶ್ವವಿದ್ಯಾ … ತಿನ ಪ್ರಖ್ಯಾತ ಲೇಖಕರನ್ನು,
ಭಾಷಾತಜ್ಞ … , ಅವರೆಲ್ಲರ ಅಭಿಪ್ರಾಯ,
ಸಲಹೆ, ಸ … ಭಾಷೆ, ಮುದ್ರಣ ವಿನ್ಯಾಸ,
ಚಿತ್ರಗಳ … ಯು ಅನೇಕ ಸಲ ಚರ್ಚಿಸಿ
ಯೋಜನೆ …

ನವಸಾಕ್ಷ … ಗಾಗಲೇ ಪ್ರಕಟವಾಗಿರುವ
ಪುಸ್ತಕಗ … ವನ್ನೆಲ್ಲ ಭಾಷಾತಜ್ಞರಿಂದ
ಪರಿಶೀಲಿ … ್ನು ನೇಮಿಸಿಕೊಂಡು ಅವರಿಗೆ
ಕಮ್ಮಟ … ್ಯದಾದ್ಯಂತ ಆಯ್ದ ಜಿಲ್ಲೆ,
ತಾಲೂಕ … ಯುತ್ತಿರುವವರಿಂದ ಅದರ
ಗುಣದ … ಗಳನ್ನೆಲ್ಲ ವಿಶ್ವವಿದ್ಯಾಲಯದ
ಗಣಕಯ … ಕ್ಷೇತ್ರ ಸಹಾಯಕರು ನೀಡಿದ್ದ
ಮಾಹಿತಿ … ಗೆ ಅನುಗುಣವಾಗಿ ವಿಷಯದ
ಆದ್ಯತೆ … ಪ್ರಖ್ಯಾತ ಲೇಖಕರು ನಮ್ಮ
ವಿಶ್ವವಿ … ಅಂತಿಮ ರೂಪ ಕೊಟ್ಟರು.
ಕಲಾವಿ … ಸಿದ್ಧಗೊಂಡ ಹಸ್ತಪ್ರತಿಗಳನ್ನು
ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದ … ಅಭಿಪ್ರಾಯ, ಪ್ರತಿಕ್ರಿಯೆಗಳನ್ನು
ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು